॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

866666

ಕಲ್ಯಾಣ ಕಿರಣ

ಜನವರಿ-2012 ಬೆಲೆ-20/-



ಕಲ್ಯಾಣ ಕಿರಣ ಚಂದಾ ದರದಲ್ಲಿ ಹೆಚ್ಚಳ

ಶರಣ ಬಂಧುಗಳೇ,

1. ಕಾಗದ ಮುದ್ರಣ ವೆಚ್ಚ ಎಲ್ಲವೂ ಏರಿರುವುದರಿಂದ ಕಲ್ಯಾಣ ಕಿರಣ ಚಂದಾದಲ್ಲಿ ಬದಲಾವಣೆ ಮಾ[illegible]ಬೇಕಾದು ಅನಿವಾರ್ಯವಾಗಿದೆ. 2012ರ ಜನವರಿ ಸಂಚಿಕೆಯಿಂದ ಬಿಡಿಪ್ರತಿಯ ಬೆಲೆ 20 ರೂ. ವಾರ್ಷಿಕ ಚಂದಾ 200 ಆಗಿದೆ. ದಯವಿಟ್ಟು ಸಹಕರಿಸಿರಿ.
2. ಆಜೀವ ಸದಸ್ಯತ್ವದ ಪರಿಕಲ್ಪನೆ ಬಹಳ ನಷ್ಟದಾಯಕವಾದ್ದರಿಂದ 5 ವರ್ಷದ ಚಂದಾ ಮ ಸ್ವೀಕರಿಸಲಾಗುವುದು. 1000 ರೂ. ಕೊಟ್ಟವರಿಗೆ 5 ವರ್ಷಕಾಲ ಕಲ್ಯಾಣ ಕಿರಣ ಕಳಿಸಲಾಗು[illegible]. ಅ ನಂತರ ನವೀಕರಿಸಬೇಕು.
3. 1970 ರಲ್ಲಿ ಕಲ್ಯಾಣ ಕಿರಣ ಪ್ರಾರಂಭವಾಯಿತು. ಆಗ ಆಜೀವ ಸದಸ್ಯತ್ವವು ಕೇವಲ 100 ರೂ. [illegible] ನ 150, 200 ಹೀಗೆ ಜಾಸ್ತಿಯಾಗುತ್ತ ಬಂದು 1000 ರೂ. ಆಯಿತು. 100 ರೂ. ಕೊಟ್ಟವರಿಗೆ ಸಹ 4[illegible] ವರ್ಷ ಕಲ್ಯಾಣ ಕಿರಣ ಕಳಿಸಲಾಗಿದೆ. ಪ್ರತಿ ತಿಂಗಳು 35 ಸಾವಿರ ರೂ.ಗಳು ನಷ್ಟ ಬರುತ್ತಿದೆ. ಆದ್ದರಿಂದ ಫೆಬ್ರ ಸಂಚಿಕೆಯಿಂದ ಕೆಲವರಿಗೆ (ಬಹಳ ಹಿಂದೆ ಸದಸ್ಯರಾದವರಿಗೆ) ಕಲ್ಯಾಣ ಕಿರಣ ಕಳಿಸುವುದನ್ನು ನಿಲ್ಲಿಸಲಾಗು ಅವರು ವಾರ್ಷಿಕ ಚಂದಾ 200 ರೂ.ಗಳನ್ನಾಗಲಿ ಪಂಚ ವಾರ್ಷಿಕ ಚಂದಾ 1000 ರೂ.ಗಳನ್ನಾಗಲಿ ಕಳಿಸಿ ತ ಚಂದಾವನ್ನು ನವೀಕರಿಸಬೇಕು. ಸಂಸ್ಥೆಯ ಮೇಲೆ ಆರ್ಥಿಕ ಹೊರೆ ಬಹಳವಾದುದರಿಂದ ಅನಿವಾರ್ಯವಾಗಿ ಕ್ರಮ ಕೈಗೊಳ್ಳಬೇಕಾಗಿದೆ ಎಂದು ತಿಳಿಸಲು ವಿಷಾದವೆನಿಸುತ್ತದೆ.

ಕಲ್ಯಾಣ ಕಿರಣ ಮಾಸ ಪತ್ರಿಕೆ, ಬಸವ ಮಂಟಪ, 2035, 20ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ರಾಜಾಜಿನಗ
ಬೆಂಗಳೂರು-560010. ಮೊಬೈಲ್ ಸಂಖ್ಯೆಗಳು-7760627640, 8892912123

ವಧು-ವರಾನ್ವೇಷಣ ವಿಭಾಗ

ಈ ವಿಭಾಗಕ್ಕೆ ಮಾಹಿತಿಕೊಡುವವರು ಕಲ್ಯಾಣ ಕಿರಣ ಕಾರ್ಯಾಲಯಕ್ಕೆ ಲಿಖಿತ ರೂಪದಲ್ಲಿ ವಿ ನೀಡಬಹುದು. ಇಲ್ಲವೇ ದೂರವಾಣಿಯಲ್ಲಿ ಕರೆ ಮಾಡಿ ವಿವರ ಕೊಡಬಹುದು.

1. ಶಿವಕುಮಾರ ಶಂಕರಯ್ಯ ಬೇಗಾವಿಮಠ, ಬಿ.ಎ.ಬಿ.ಎಡ್. ಜನ್ಮ ದಿನಾಂಕ 14-6-1985, ಅಳ್ನಾವ ಧಾರವಾಡ ಜಿಲ್ಲೆ, ಇವರು ಆರ್ಮಿ ಪೋಸ್ಟಲ್ ಸರ್ವೀಸ್‌ದಲ್ಲಿ ಅರುಣಾಚಲ ಪ್ರದೇಶದಲ್ಲಿ ಕಾಯಕ ನಿರತರಾಗಿದ್ದಾ ಸಂಪರ್ಕಿಸುವ ಸಂಖ್ಯೆ- 9964470241. ವಧು ಗ್ರಾಜುಯೇಷನ್ ಆಗಿರಬೇಕು.

2. ಚೇತನಕುಮಾರ್ ಶಂಕರಪ್ಪ ಬಿಳಿ ಅಂಗಡಿ, ಜನ್ಮ ದಿನಾಂಕ 27-6-1981. ಎಂ.ಕಾಂ. ದಾಸರಹ ಬೆಂಗಳೂರು, MNC ಕಂಪನಿಯಲ್ಲಿ Software Engineer ಆಗಿದ್ದಾರೆ. ಮಾಸಿಕ ವೇತನ ರ 20,000/-. ಗ್ರಾಜುಯೇಟ್ ಕನ್ಯೆ ಬೇಕು.

3. ಶ್ರೀಶೈಲ ಮುರುಗೇಂದ್ರಪ್ಪ, ಜನ್ಮ ದಿನಾಂಕ-15-4-1982, ಎಲೆಕ್ಟ್ರಿಕಲ್ ಡಿಪ್ಲೊಮಾ ಮಾಡಿಕೊಂ ಚಿತ್ರದುರ್ಗ ಜಿಲ್ಲೆ ನಲ್ಲಿಕಟ್ಟೆ ಊರಿನಲ್ಲಿ ಸ್ವಂತ ಜಮೀನು ನೋಡಿಕೊಳ್ಳುತ್ತಾರೆ. ಸಂಪರ್ಕಿಸು ದೂರವಾಣಿ-9448774477.

4. ಮುರುಗೇಂದ್ರ ಸ್ವಾಮಿ, ಮರಿಯಾಲ ಗ್ರಾಮ, ತಾ-ಜಿ-ಚಾಮರಾಜನಗರ, 27ವರ್ಷ ಬಿಸಿನೆಸ್, ಸ್ವ ಮನೆ, ಜಮೀನು ಎಲ್ಲ ಉಂಟು. ತಿಂಗಳಿಗೆ ರೂ.25,000/- ಆದಾಯವಿದೆ. ಬಸವ ಧರ್ಮ ಸಂಸ್ಕಾರದ ಬೇಕು. ಸಂಪರ್ಕಿಸುವ ದೂರವಾಣಿ-9900835221.

5. ಅನುಷಾ; ಪಿ.ಯು.ಸಿ ನರ್ಸಿಂಗ್ ಕೋರ್ಸ್ ಆಗಿದೆ. ಮಂಗಳೂರು ವಾಸ. ಜನ್ಮ ದಿನಾಂಕ-16-4-198 ಮಂಗಳೂರಿನ ಪ್ರೈವೇಟ್ ಆಸ್ಪತ್ರೆಯಲ್ಲಿ ನೌಕರಿ, ವರ-ಕೆಲಸದಲ್ಲಿದ್ದರೂ ಸರಿ ಅಥವಾ ಬಿಸಿನೆಸ್ ಆದ ಪರವಾಗಿಲ್ಲ. ಸಂಪರ್ಕಿಸುವ ದೂರವಾಣಿ-9483456810.

6. ಅನ್ವಿತಾ; ಪಿ.ಯು.ಸಿ ನರ್ಸಿಂಗ್ ಕೋರ್ಸ್ ಆಗಿದೆ. ಮಂಗಳೂರು ಮೂಲ. ಜನ್ಮ ದಿನಾಂಕ: 28-1-19 ಮೈಸೂರಿನಲ್ಲಿ ಆಯುರ್ವೇದಿಕ್ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಾಳೆ, ವರ-ಕೆಲಸದಲ್ಲಿದ್ದರೂ ಸರಿ ಅಥ ಬಿಸಿನೆಸ್ ಆದರೂ ಪರವಾಗಿಲ್ಲ. ಸಂಪರ್ಕಿಸುವ ದೂರವಾಣಿ-9483456810.

ಈ ವಿಭಾಗಕ್ಕೆ ವಿವರ ನೀಡುವವರು ಸಂಪರ್ಕಿಸಬೇಕಾದ ದೂರವಾಣಿ
ಚಂದ್ರಮೌಳಿ ಎಮ್ಮಿಗನೂರು - 9448466805

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥
866666

ಸಂಪುಟ-42	ಬಸವ ಶಕೆ -878	ಪಂಚವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-01	ಜನವರಿ- 2012	ವಾರ್ಷಿಕ ಚಂದಾ 200 ರೂ.

ಹೊಸ ವರ್ಷದ ಶುಭಾಶಯಗಳೊಡನೆ

ಬಸವಾತ್ಮಜೆಯ ಕರೆ

ಶರಣು ಶರಣಾರ್ಥಿ ಶರಣರೆ ಶರಣು ಶರಣಾರ್ಥಿ
ಶರಣು ಶರಣಾರ್ಥಿ ನಿಮಗೆ ಶರಣು ಶರಣಾರ್ಥಿ ॥ಪ॥

ಬನ್ನಿರಿ ಶರಣರೆ ಬನ್ನಿರಿ ಬೇಗನೆ
ಬಸವ ಮಹಾಮನೆ ಕಟ್ಟುವ ಬನ್ನಿ
ಶರಣರ ಆಶಯ ಪೂರೈಸ ಬನ್ನಿ
ಶರಣರ ಋಣವನು ತೀರಿಸ ಬನ್ನಿ ॥1॥

ಅಂದು ಕಲ್ಯಾಣದಿ ಕ್ರಾಂತಿಯು ಘಟಿಸೆ
ತಂದೆಯು ಪಡೆದರು ಗಡಿಯ ಪಾರನು
ವಚನ ವಾಙ್ಮಯವ ಹೊತ್ತ ಶರಣರು
ಹರಣವ ತೆತ್ತು ಕಾಪಿಟ್ಟರದನು ॥2॥

ತಂದೆ ತಾಯಿಯ ಆಸರೆ ತಪ್ಪಲು
ಲಿಂಗಾಯತ ಗಣವು ಅನಾಥವಾಯಿತು
ಅತ್ತಿತ್ತಲೆಯುತ ಸೋತು ಬಳಲುತಿರೆ
ಮತ್ತೆ ಸಿಕ್ಕಿದೆ ಶರಣ ಪರಂಪರೆ ॥3॥

ವೀರಶೈವರು, ವೈದಿಕ ಮತಿಗಳು
ತಂದು ತುಂಬಿಹ ಕಸವನು ಗುಡಿಸುವಾ
ಧೂರ್ತ ಸ್ವಾರ್ಥಿಗಳ ಸಂಚನು ಅರಿತು
ಮತಿವಂತರ ಸಂಘಟನೆಯ ಮಾಡುವ ॥4॥

ಲಿಂಗಾಯತವು ಸ್ವತಂತ್ರ ಧರ್ಮ
ಗುರು ಬಸವಣ್ಣನೆ ಆತ್ಮವೆಂದರಿತು
ತನು ಮನ ಧನವ ಸವೆಸುತಲೀಗ
ಬಸವ ಸಂದೇಶವ ಸಾರುವ ಬನ್ನಿ ॥5॥

ದಿಟ್ಟ ಹೆಜ್ಜೆಗಳ ಹಾಕುವ ಬನ್ನಿ
ನಿಷ್ಠೆಯ ಛಲವ ತಾಳುವೆವೆನ್ನಿ
ಶರಣ ಸಮಾಜವ ಕಟ್ಟುವ ಬನ್ನಿ
ಬಸವಾತ್ಮಜೆಯ ಬಿನ್ನಹವಿದುವು ॥6॥

-ಮಾತಾಜಿ

★ಕಲ್ಯಾಣ ಕಿರಣ★

ಕಿರಣಗನ್ನಡಿ



ಕಲ್ಯಾಣ ಕಿರಣದ ಓದುಗರಿಗೆ

2012-ಹೊಸ ವರ್ಷದ ಶುಭಾಷಯಗಳು



Kalyana Kirana -Reg No.19988/70. Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10. Ph: 080-23131476, 22923736

ಬಸವ ವಚನಾಮೃತ

707. ಕಾಯಕದಿಂದ ಆರ್ಜಿಸಿದುದು ದಾಸೋಹಕ್ಕೆ

ನಾನು ಆರಂಬವ ಮಾಡುವೆನಯ್ಯಾ ಗುರುಪೂಜೆಗೆಂದು,
ನಾನು ಬೆವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು,
ನಾನು ಪರಸೇವೆಯ ಮಾಡುವೆನಯ್ಯಾ ಜಂಗಮದಾಸೋಹಕ್ಕೆಂದು,
ನಾನಾವಾವ ಕರ್ಮಂಗಳ ಮಾಡಿದಡೆಯು
ಆ ಕರ್ಮಫಲ ಭೋಗವ ನೀ ಕೊಡುವೆ ಎಂಬುದ ನಾನು ಬಲ್ಲೆನು.
ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದು ಕ್ರೀಯ ಮಾಡೆನು;
ನಿಮ್ಮ ಸೊಮ್ಮಿಂಗೆ ಸವೆಸುವೆನು, ನಿಮ್ಮಾಣೆ, ಲಿಂಗದೇವಾ.

–ಬ.ವ.ದೀ 706

ಸುಪ್ರಸಿದ್ಧವಾದ ಗುರು ಬಸವಣ್ಣನವರ ಜನಪ್ರಿಯ ವಚನಗಳಲ್ಲಿ ಇದೂ ಒಂದು. ಮಾಡುವ ಕಾಯಕಗಳಲ್ಲಿ ಮುಖ್ಯವಾದವು ಮೂರು. 1. ಆರಂಬ(ಒಕ್ಕಲುತನ) 2. ವ್ಯವಹಾರ. 3. ಪರಸೇವೆ. ಆರಂಬ ಎಂದರೆ ಒಕ್ಕಲುತನ. ಈ ಪದ ಹಳೆಯ ಮೈಸೂರು ಭಾಗದಲ್ಲಿ ಚಿರಪರಿಚಿತ. ಬಹಳ ಸಾಹಿತಿಗಳು, ಸಂಗೀತಗಾರರು ಆರಂಬದ ಬದಲಿಗೆ ಆರಂಭ ಎಂದು ಬಳಸುವರು. ಈ ತಪ್ಪನ್ನು ತಿದ್ದಿಕೊಳ್ಳಬೇಕು.

"ನಾನು ಕೃಷಿ ಕಾಯಕವನ್ನು ಮಾಡುತ್ತೇನೆ.ಅದರ ಆದಾಯವು ಗುರುಪೂಜೆಗೆ ಸಲ್ಲಲೆಂದು, ವ್ಯವಹಾರವನ್ನು ಮಾಡುತ್ತೇನೆ ಅದರ ಆದಾಯವು ಲಿಂಗಾರ್ಚನೆಗೆ ವಿನಿಯೋಗವಾಗಲೆಂದು. ಪರಸೇವೆಯನ್ನು ಮಾಡುತ್ತೇನೆ. ಅದರ ಆದಾಯವು ಜಂಗಮಸೇವೆಗೆ ಸಲ್ಲಲೆಂದು" ಎಂದು ಗುರು ಬಸವಣ್ಣನವರು ಹೇಳುತ್ತಾರೆ. ಕೃಷಿಯು ಶರೀರದಿಂದ ಮಾಡುವಂಥದು; ವ್ಯಾಪಾರವು ಧನವನ್ನು ತೊಡಗಿಸಿ ಮಾಡುವಂಥದು; ಹೊಲವೂ ಇಲ್ಲ, ಧನವೂ ಇಲ್ಲ ಎಂಬುವವನು ಇತರರ ಬಳಿ ಉದ್ಯೋಗ ಮಾಡಬೇಕು. ಯಾವುದೇ ರೀತಿಯ ಕಾಯಕ ಮಾಡಿದಡೆಯೂ ಅದಕ್ಕೆ ತಕ್ಕ ಫಲಭೋಗವು ಪ್ರಾಪ್ತಿಯಾಗುವುದು. ಹೆಚ್ಚಿನ ಸಂಪಾದನೆಯ ಕಾಯಕವೇ ಇರಲಿ–ಸಣ್ಣ ಸಂಪಾದನೆಯ ಕಾಯಕವೇ ಇರಲಿ, ಬಂದ ಸಂಪಾದನೆಯ ಒಂದು ಭಾಗವನ್ನು ಗುರು–ಲಿಂಗ–ಜಂಗಮಕ್ಕೆ ಹೊರತಾಗಿ ಅನ್ಯ ಕಾರ್ಯಕ್ಕೆ ಬಳಸಬಾರದು. ಈ ತ್ರಿವಿಧ ದಾಸೋಹಕ್ಕೆ ಮಾತ್ರ ಬಳಸಬೇಕು.ಎಂದು ಲಿಂಗದೇವನ ಮೇಲೆ ಆಣೆಯಿಟ್ಟು ಹೇಳುತ್ತಾರೆ.

708. ಒಡಲ ಅವಸರಕ್ಕಲ್ಲ ಒಡೆಯನ ಅವಸರಕ್ಕೆ.

ಹೊತ್ತಾರೆ ಎದ್ದು ಕಣ್ಣ ಹೊಸೆಯುತ್ತ
ಎನ್ನ ಒಡಲಿಂಗೆ, ಎನ್ನ ಒಡವೆಗೆ, ಎನ್ನ ಮಡದಿ–ಮಕ್ಕಳಿಗೆಂದು
ಕುದಿದೆನಾದಡೆ ಎನ್ನ ಮನಕ್ಕೆ ಮನವೇ ಸಾಕ್ಷಿ!
" ಆಸನೇ ಶಯನೇ ಯಾನೇ ಸಂಪರ್ಕೇ ಸಹಭೋಜನೇ!

ಸಂಚರಂತಿ ಮಹಾಘೋರೇ ನರಕೇ ಕಾಲಮಕ್ಷಯಂ!!
ಎಂಬ ಶೃತಿಯ ಬಸವಣ್ಣನೋದುವನು"ಎಂಬರು,
ಭವಿ ಬಿಜ್ಜಳನ ಗದ್ದುಗೆಯ ಕೆಳಕೆ ಕುಳ್ಳಿರ್ದು
ಓಲೈಸಿಹನೆಂದು ನುಡಿವರಯ್ಯಾ ಪ್ರಮಥರು.
ಕೊಡುವೆನೆ ಉತ್ತರವನವರಿಗೆ? ಕೊಡಲಮ್ಮೆ!
ಹೊಲೆ ಹೊಲೆಯರ ಮನೆಯ ಹೊಕ್ಕಾದಡೆಯೂ,
ಸಲೆ ಕೈಕೂಲಿಯ ಮಾಡಿಯಾದಡೆಯೂ,
ನಿಮ್ಮ ನಿಲವಿಂಗೆ ಕುದಿವೆನಲ್ಲದೆ, ಎನ್ನ ಒಡಲವಸರಕ್ಕೆ
ಕುದಿದೆನಾದಡೆ ತಲೆದಂಡ! ಲಿಂಗದೇವಾ. –ಬ.ವ.ದೀ 707

ಬೆಳಿಗ್ಗೆ ಬೇಗನೆ ಏಳುತ್ತಲೇ ಮನುಷ್ಯ ಚಿಂತೆ ಮಾಡುವುದು ಒಡಲನ್ನು ಅಂದರೆ ಶರೀರವನ್ನು ಪೋಷಿಸಲಿಕ್ಕೆ; ಇಂದು ಏನು ತಿನ್ನಲಿಕ್ಕೆ ಇರುವುದು ಎಂಬ ಚಿಂತೆಯಿಂದ ಆರಂಭವಾಗಿ ಆಲೋಚನೆ ಮುಂದುವರಿದು ಎಂಥಾ ಅಲಂಕಾರ ಮಾಡಿಕೊಳ್ಳಬೇಕು, ಎಂಥಾ ಒಡವೆ ಧರಿಸಬೇಕು ಎಂದು ಸಾಗಿ ನನ್ನ ಮಡದಿಗಾಗಿ ಏನು ಮಾಡಲಿ, ಮಕ್ಕಳಿಗಾಗಿ ಏನು ಮಾಡಲಿ ಎಂದು ಚಿಂತಿಸುವನು. ತನಗೈತನ್ನ ಮಡದಿ ಮಕ್ಕಳಿಗೆ ಆಸ್ತಿಪಾಸ್ತಿ ಮಾಡಲು ಆಸೆ ಪಡುವನು. ಆದರೆ ಪ್ರಧಾನಿ ಬಸವಣ್ಣನವರು ಒಡಲಿಗೆ, ಒಡವೆಗೆ, ಮಡದಿ–ಮಕ್ಕಳಿಗಾಗಿ ಕುದಿಯದೆ ಸಮಾಜದ ಹಿತಕ್ಕಾಗಿ ಚಿಂತಿಸುವರು. ಒಡಲ ಅವಸರಕ್ಕಾಗಿ ಪರಿತಪಿಸದೆ ಒಡೆಯ ಲಿಂಗದೇವನ ಒತ್ತಡಕ್ಕೆ ಸ್ಪಂದಿಸುವರು.

ಈ ವಚನದಲ್ಲಿ ಇನ್ನೂ ಒಂದು ಸಮಸ್ಯೆಯ ಚಿಂತನೆ ಇದೆ."ಶರಣನಾದವನು ಭವಿಯೊಡನೆ ವ್ಯವಹರಿಸಬಾರದು. ಕುಳಿತುಕೊಳ್ಳುವುದರಲ್ಲಿ, ಮಲಗುವುದರಲ್ಲಿ, ವ್ಯವಹಾರ ಮಾಡುವುದರಲ್ಲಿ, ಊಟ ಮಾಡುವುದರಲ್ಲಿ ಭವಿಯೊಡನೆ ಒಡನಾಡಿದರೆ ನರಕದಲ್ಲಿ ಬೀಳಬೇಕಾಗುವುದು.'ಎಂಬ ಶಾಸ್ತ್ರ ವಾಕ್ಯವಿದ್ದೂ ಭವಿ ಬಿಜ್ಜಳನ ಕೈಕೆಳಗೆ ಪ್ರಧಾನಿಯಾಗಿ ಕೆಲಸ ಮಾಡುತ್ತಿರುವರು ಎಂದು ಕೆಲವರು ಟೀಕಿಸುತ್ತಿದ್ದಾರೆ. ಇವರಿಗೆ ಉತ್ತರವನ್ನು ಕೊಡಲೆ? ಕೊಡುತ್ತೇನೆ. ಬಿಜ್ಜಳ ಮಹಾರಾಜನ ಬಳಿ ಶ್ರೇಷ್ಠ ಹುದ್ದೆಯಲ್ಲಿ ಇರುವುದಲ್ಲ, ಹೊಲೆಯರ ಮನೆಯ ಹೊಕ್ಕು, ಕೈಕೂಲಿಯ ಕಾಯಕವನ್ನು ಬೇಕಾದರೂ ಮಾಡಲು ಸಿದ್ಧನಿದ್ದೇನೆ. ಕಾಯಕ ಮುಖ್ಯವೇ ವಿನಾ ಯಾರ ಬಳಿ ಮಾಡುತ್ತೇವೆ ಎಂಬುದಲ್ಲ. ಪರಾವಲಂಬಿಯಾಗದೆ ಯಾವುದಾದರೊಂದು ಕಾಯಕವನ್ನು ಅವಲಂಬಿಸಿಕೊಂಡು ಲಿಂಗದೇವಾ, ನಿಮ್ಮ ಧ್ಯಾನದಲ್ಲಿರುವೆನೇ ವಿನಾ ಶರೀರದ ಧಾವತಿಗಾಗಿ ಬದುಕುವುದಿಲ್ಲ." ವೀರಶೈವದಲ್ಲಿ ಮತಾಂಧತೆ ಜಾಸ್ತಿ. ಭವಿಗಳೊಡನೆ ಒಡನಾಡ ಬಾರದು ಎಂಬ ಕಠೋರ ನೇಮವಿದೆ. ಭವಿಗಳ ಮುಖವನ್ನು ಬೆಳಿಗ್ಗೆ ಎದ್ದು ನೋಡಬಾರದು ಎಂಬ ನಂಬಿಕೆ ಕೂಡ ಇದೆ. ಈ ನೇಮವನ್ನು ಮುರಿದು ಗುರು ಬಸವಣ್ಣನವರು ಕಾಯಕವನ್ನು ನೀಡುವ ಧಣಿ ಯಾರಾದರೇನು, ಕಾಯಕವು ಶರಣ ತತ್ವಕ್ಕೆ ಅನುಸಾರವಾಗಿ ಇರಬೇಕೇ ವಿನಾ ಅವನ ಜಾತಿ–ಕುಲ ಮುಖ್ಯವಲ್ಲ ಎಂಬ ಬದಲಾವಣೆಯನ್ನು ಈ ವಚನದಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ.

709. ಧಾರ್ಮಿಕ ಸಮಾನತೆ.

ದೇವ, ದೇವಾ, ಬಿನ್ನಪ, ಅವಧಾರು:

ವಿಪ್ರ ಮೊದಲು ಅಂತ್ಯಜ ಕಡೆಯಾಗಿ
ಭಕ್ತರಾದವರನೆಲ್ಲರನೊಂದೆ ಎಂಬೆ;
ಹಾರುವ ಮೊದಲು ಶ್ವಪಚ ಕಡೆಯಾಗಿ
ಈ ಹೀಂಗೆಂದು ನಂಬುವುದೆನ್ನ ಮನವು.
ಈ ನುಡಿದ ನುಡಿಯೊಳಗೆ ಎಳ್ಳ ಮೊನೆಯಷ್ಟು ಸಂದೇಹವುಳ್ಳಡೆ,
ನೀನಂದೇ ಮೂಗ ಕೊಯ್ಯಿ, ಲಿಂಗದೇವ. –ಬ.ವ.ದೀ 708

"ದೇವ ದೇವಾ, ನನ್ನ ವಿನಂತಿ, ಪರಾಂಬರಿಸು. ಸಮಾಜದಲ್ಲಿ ವಿಪ್ರ ಮೊದಲಾಗಿ ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ಚತುರ್ವರ್ಣಗಳವರು, ಸಮಾಜದಿಂದ ಹೊರಗೆ ಇಡಲ್ಪಟ್ಟ ಅಂತ್ಯಜ ಸಮೂಹದವರು ಎಂದು ವಿಂಗಡಿಸಲಾಗಿದೆ. ಈ ಐವರಲ್ಲಿ ಯಾರೇ ಇರಲಿ ಧಾರ್ಮಿಕ ಸಂಸ್ಕಾರ ಪಡೆದು ಭಕ್ತರಾದವರನ್ನು ಸಮಾನವಾಗಿ ಕಾಣುತ್ತೇನೆ.ಅದೇ ರೀತಿ ಹಾರುವ ಮೊದಲು ಶ್ವಪಚ ಕಡೆಯಾಗಿ ಭವಿಗಳಾದವರನ್ನೆಲ್ಲ ಸಮಾನವಾಗಿ ಕಾಣುವೆ. ಹೀಗೆ ನನ್ನ ಮನಸ್ಸು ನಂಬುತ್ತಿದೆ. ಈ ರೀತಿ ನುಡಿವ ನಾನು ನಡೆಯಲ್ಲೂ ಅದನ್ನೆ ಆಚರಣೆಗೆ ತರುತ್ತೇನೆ. ಇದರಲ್ಲಿ ಎಳ್ಳಷ್ಟಾದರೂ ಸಂದೇಹಪಟ್ಟು ನಾನು ಆಚರಿಸಿದರೆ ನೀನು ನನ್ನನ್ನು ಮೂಗು ಕೊಯ್ದು ಶಿಕ್ಷಿಸು."

ಧಾರ್ಮಿಕ ಸಮಾನತೆ (Religious Equality)ಯನ್ನು ಬೋಧಿಸುವ ಮಹತ್ವಪೂರ್ಣ ವಚನವಿದು. ದೀಕ್ಷೆಯನ್ನು ಪಡೆದುಕೊಂಡು ಭಕ್ತರಾದವರು ಪೂರ್ವಾಶ್ರಮದಲ್ಲಿ ಯಾವುದೇ ವರ್ಣ, ಕುಲ, ಜಾತಿಯವರಿರಬಹುದು. ದೀಕ್ಷಾ ನಂತರ ಆ ಭೇದವಳಿದು ಭಕ್ತರಾಗುವರು, ಶರಣರಾಗುವರು. ಭಕ್ತರಲ್ಲಿ ಶ್ರೇಷ್ಠರು ಕನಿಷ್ಠರು ಎಂದು ವಿಂಗಡನೆ ಮಾಡಬಾರದು.

ಕೆಲವು ವಿಚಾರವಾದಿಗಳು ಇಂದಿನ ಸಮಾಜದ ಹಿನ್ನೆಲೆಯಲ್ಲಿ ಹೀಗೆ ಟೀಕಿಸುವುದುಂಟು "ಗುರು ಬಸವಣ್ಣನವರು ದೀಕ್ಷೆಯನ್ನು ಅಳತೆಗೋಲಾಗಿಟ್ಟರು. ದೀಕ್ಷೆ ಹೊಂದಿದವರಲ್ಲಿ ಸಮಾನತೆ ಬೋಧಿಸಿದರು. ವೈದಿಕ ಧರ್ಮದ ಶೂದ್ರನಿಗೂ ಲಿಂಗಾಯತ ಧರ್ಮದ ಭವಿಯ ಪರಿಕಲ್ಪನೆಗೂ ವ್ಯತ್ಯಾಸವೇನಿದೆ? ಜನಿವಾರ ತೊರೆದು ಶಿವದಾರ(ಲಿಂಗ) ಹಾಕಿದರು. ಹೊಸ ಜಾತಿಯನ್ನು ಹುಟ್ಟು ಹಾಕಿದರು." ಅಂದು ಶೂದ್ರರಿಗೆ ಯಾವುದೇ ಧರ್ಮ ಸಂಸ್ಕಾರವಿರಲಿಲ್ಲ; ಅಂತ್ಯಜರಿಗಂತೂ ಸಂಸ್ಕಾರವತ್ತಲಿರಲಿ ಊರೊಳಗೆ ಪ್ರವೇಶವೇ ಇರಲಿಲ್ಲ. ಅಂಥ ಸಮಯದಲ್ಲಿ ಧರ್ಮದ ಹೆಬ್ಬಾಗಿಲುನ್ನು ತೆರೆದು ಶೂದ್ರರಿಗೆ, ಅಸ್ಪೃಶ್ಯರಿಗೆ ಧರ್ಮ ಸಂಸ್ಕಾರ ನೀಡಿದ್ದು ಬಹುದೊಡ್ಡ ಸಾಧನೆಯಲ್ಲವೆ? ವೈದಿಕ ಧರ್ಮದ ಶೂದ್ರನಿಗೆ ಧರ್ಮ ಸಂಸ್ಕಾರ ನಿಷಿದ್ಧ. ಭವಿಗೆ ಬಾಗಿಲು ಸದಾ ತೆರೆದಿರುತ್ತದೆ. ಭಕ್ತನೆಂದರೆ ಶಾಲೆಗೆ ಸೇರಿರುವ ವಿದ್ಯಾರ್ಥಿ, ಭವಿ ಎಂದರೆ ಶಾಲೆಗೆ ಸೇರದವನು; ಜನಿವಾರ ಎಲ್ಲರಿಗೂ ಲಭ್ಯವಿಲ್ಲ. ಇಷ್ಟಲಿಂಗ ಎಲ್ಲರಿಗೂ ಲಭ್ಯ. ಹೊಸ ಜಾತಿಯನ್ನು ಸೃಷ್ಟಿಸಲಿಲ್ಲ– ಹಲವಾರು ಜಾತಿಗಳವರನ್ನೂ ಒಳಗೊಳ್ಳಬಲ್ಲ ಹೊಸ ಧರ್ಮ– ಲಿಂಗಾಯತವನ್ನು ಪ್ರಾರಂಭಿಸಿದರು. ಒಂದು ವೇಳೆ ಈ ಧರ್ಮ ಹುಟ್ಟದೆ ಇದ್ದರೆ ಕರ್ನಾಟಕ, ಮಹಾರಾಷ್ಟ್ರ ರಾಜ್ಯಗಳಲ್ಲಿ ಇಸ್ಲಾಂ ಮತ್ತು ಕ್ರೈಸ್ತ ಧರ್ಮಕ್ಕೆ ಆಗುವ ಮತಾಂತರ ಹೆಚ್ಚಾಗುತ್ತಿತ್ತೆಂದರೆ ಉತ್ಪ್ರೇಕ್ಷೆಯಲ್ಲ.

710. ನಿಮ್ಮವರಲ್ಲದವರ ಒಲ್ಲೆ.

ಒಲ್ಲೆನಯ್ಯಾ, ನಿಮ್ಮವರಲ್ಲದವರ;
ಒಲ್ಲೆನಯ್ಯಾ, ಒಲ್ಲೆನಯ್ಯಾ, ಜಗವೆಲ್ಲರಿಯಲು,
ಒಲ್ಲೆನಯ್ಯಾ, ಒಲ್ಲೆನಯ್ಯಾ, ನೀ ಮುನಿದಡೆ ಮುನಿ,

ಲಿಂಗದೇವಾ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ!

–ಬ.ವ.ದೀ 709

ಲಿಂಗದೇವಾ, ಯಾರು ನಿನ್ನನ್ನು ನಂಬುವುದಿಲ್ಲವೋ ನಿನಗೆ ಶರಣಾಗತರಾಗುವುದಿಲ್ಲವೋ ಅಂಥವರ ಒಡನಾಟವನ್ನು ನಾನು ಒಲ್ಲೆ. ಇಷ್ಟಲಿಂಗದೇವಾ, ಯಾರು ನಿನ್ನನ್ನು ಧರಿಸುವುದಿಲ್ಲವೋ ಅವರೊಡನೆ ನಾನು ವ್ಯವಹರಿಸೆನು, ಇಡೀ ಜಗತ್ತಿಗೇ ಗೊತ್ತಾಗುವಂತೆ ನಾನು ಹೇಳುವೆನು; ನೀನು ಮುನಿದರೂ ಪರವಾಗಿಲ್ಲ ನಾನಂತೂ ಅಂಥವರಿಂದ ದೂರವಿರುತ್ತೇನೆ. ನಿಮ್ಮಾಣೆಯಾಗಿಯೂ ಶರಣರಾಣೆಯಾಗಿಯೂ ಇದು ಸತ್ಯ!

ನಾಸ್ತಿಕರು ಮತ್ತು ಅನಾಚಾರಿಗಳಾದವರ ಸಂಗಡ ಒಡನಾಡುವುದರಿಂದ ಕೆಲವೊಮ್ಮೆ ಅವರನ್ನು ತಿದ್ದಹೋಗಿ ಆಸ್ತಿಕರು ಮತ್ತು ಆಚಾರವಂತರೇ ಬದಲಾಗುವ ಸಂಭವವಿರುತ್ತದೆ. ಆದ್ದರಿಂದ ಅಂಥವರಿಂದ ದೂರವಿರಬೇಕು. ಇನ್ನು ಸಹಭೋಜನ, ವಿವಾಹ ಸಂಬಂಧ ಮಾಡುವಾಗ ಇಷ್ಟಲಿಂಗಧಾರಣೆ ಸಹ ಬಹುಮುಖ್ಯ ಎಂಬ ಭಾವ ಈ ವಚನದಲ್ಲಿ ಅಭಿವ್ಯಕ್ತವಾಗಿದೆ.

711. ಜನ್ನ ವಿರೋಧಿ ಲಿಂಗಾಯತ ಧರ್ಮ

ಆದಿಯಲಾಗಲಿ, ವೇದದಲಾಗಲಿ, ಶಾಸ್ತ್ರದಲಾಗಲಿ, ಸಮಯದಲಾಗಲಿ
ಎನ್ನವರೆನ್ನನು. ಎನ್ನವರೆನ್ನನು!
ಎನ್ನವರೆಂದಡೆ, ಸಂಗಾ ನಿಮ್ಮಲ್ಲಿಗೆ ದೂರ!
ಎನ್ನವರಾದಡೆ ಜನ್ನಕ್ಕೆ ನಡೆವರೆ?
ಎನ್ನವರಲ್ಲ, ಲಿಂಗದೇವಾ, ನಿಮ್ಮಾಣೆ! –ಬ.ವ.ದೀ–710

ಮೂಲತಃ ಗುರು ಬಸವಣ್ಣನವರು ಬ್ರಾಹ್ಮಣ್ಯದಿಂದ ಬಂದವರು, ವೈದಿಕ ಸಂಪ್ರದಾಯಸ್ಥರು ವೈದಿಕ ಶಾಸ್ತ್ರ ಮತ್ತು ಧರ್ಮ (ಸಮಯ)ದಲ್ಲಿ ಮೊದಲು ಇದ್ದವರು. ಅದನ್ನು ಬಿಡಲಿಕ್ಕೆ ಮುಖ್ಯ ಕಾರಣ ವೈದಿಕ ಧರ್ಮದ ವರ್ಣಾಶ್ರಮ ವ್ಯವಸ್ಥೆ, ಹೋಮ – ಹವನ, ಯಜ್ಞ– ಯಾಗಾದಿಗಳ ಆಚರಣೆ, ಬಹುದೇವತಾ ಉಪಾಸನೆ, ಸಾಮಾಜಿಕ –ಧಾರ್ಮಿಕ ಅಸಮಾನತೆ. ಅವರ ಪೂರ್ವಾಶ್ರಮದವರು, ಕುಲಬಾಂಧವರು ಬಂದಾಗ ಅವರು ಈ ವಚನವನ್ನು ನುಡಿದಿರಬೇಕು. ಯಾವ ದೃಷ್ಟಿಯಿಂದಲೂ ಇವರು ನನ್ನವರು ಎನ್ನುವುದಿಲ್ಲ. ಇವರು ನನ್ನವರು ಎಂದು ಭಾವಿಸಿದರೆ ಲಿಂಗದೇವಾ ನಿನಗೆ ನಾನು ದೂರವಾಗುವೆನು. ನನ್ನವರಾದವರು ಯಾರೂ ಯಜ್ಞ ಮಾಡುವುದಿಲ್ಲ. ಆದ್ದರಿಂದ ಯಜ್ಞ ಮಾಡುವವರಾರೂ ನನ್ನವರಾಗುವುದಿಲ್ಲ.

ಈ ವಚನದಿಂದ ಗ್ರಹಿಸಬೇಕಾದ ಅಂಶಗಳು ಎರಡು. ಒಂದು, ಶಿವ ಪರಂಪರೆಗೆ. ಯಜ್ಞವು ಸಲ್ಲದು. ಇದು ಅಷ್ಟವಿಧಾರ್ಚನೆ ಪ್ರಧಾನವಾದ ಧರ್ಮ. ಇಲ್ಲಿ ಅಗ್ನಿಯ ಮೂಲಕ ದೇವರಿಗೆ ಸಲ್ಲಿಸಲಾಗುವುದೆಂಬ ಭಾವವಿರದು. ಶಿವಭಕ್ತರು ಯಜ್ಞ ವಿರೋಧಿಗಳಿದ್ದರು. ದ್ರಾವಿಡರು ಯಜ್ಞ ವಿರೋಧಿಗಳು. ಅವರನ್ನು ಆರ್ಯರು ತಮ್ಮ ಶಾಸ್ತ್ರಗಳಲ್ಲಿ ರಾಕ್ಷಸರು ಎಂದು ಕರೆದರು. ಗುರು ಬಸವಣ್ಣನವರು ಯಜ್ಞ ವಿರೋಧಿಗಳು. ಆದ್ದರಿಂದ ಅವರು ಅನುಯಾಯಿಗಳಾದ ಲಿಂಗಾಯತರು ಹೋಮ–ಹವನಾದಿಗಳನ್ನು ಮಾಡಬಾರದು, ಯಜ್ಞ –ಯಾಗಗಳಲ್ಲಿ ಭಾಗಿಗಳಾಗಬಾರದು. ಹೋಮ–ಹವನಾದಿಗಳು ಅಹಿಂಸಾತ್ಮಕವಾಗಿದ್ದರೂ ಅಲ್ಲಿ ವಸ್ತುಗಳನ್ನು ಸುಡುವ ಅಪವ್ಯಯವಿದೆ. ಯಜ್ಞ– ಯಾಗಗಳಲ್ಲಿ ವಸ್ತುಗಳ ಅಪವ್ಯಯದೊಡನೆ ಪ್ರಾಣಿಬಲಿಯಂತಹ ಹಿಂಸೆ ಇರುತ್ತದೆ. ಆದ್ದರಿಂದ ಈ ಕ್ರಿಯೆಗಳಲ್ಲಿ ತೊಡಗಿಸಿಕೊಳ್ಳುವುದು ಧರ್ಮಗುರು

ದ್ರೋಹವಾಗುತ್ತದೆ. (ಲಿಂಗಾಯತರು ಹಿಂದುಗಳಲ್ಲ ಎನ್ನುವುದಕ್ಕೆ ಈ ವಚನವು ಅತ್ಯುತ್ತಮ ಆಧಾರವಾಗ ಬಲ್ಲುದು. ಆದಿಯಾಗಲಿ= ಮೂಲತಃ ಹಿಂದು ಸಮಾಜ ಗರ್ಭದಿಂದ ಉದಯಿಸಿದರೂ ಲಿಂಗಾಯತರು ಹಿಂದುಗಳಲ್ಲ. ವೇದಗಳನ್ನು ಅಪೌರುಷೇಯವೆಂದು ಒಪ್ಪುವುದಿಲ್ಲ, ಶಾಸ್ತ್ರದಲಾಗಲಿ=ಹಿಂದು ಧಾರ್ಮಿಕ ಶಾಸ್ತ್ರಗಳಾದ ಆಗಮ, ಶ್ರುತಿ, ಸ್ಮೃತಿ, ಪುರಾಣಗಳನ್ನು ಒಪ್ಪುವುದಿಲ್ಲ. ಸಮಯದಲ್ಲಾಗಲಿ=ಆಚರಣೆಯಲ್ಲಾಗಲಿ ಹೊಂದುವುದಿಲ್ಲ. ಗುರು ಬಸವಣ್ಣನವರ ಅನುಯಾಯಿಗಳಾದ ಲಿಂಗಾಯತರು ಯಜ್ಞ–ಯಾಗ, ಹೋಮ –ಹವನ ಮಾಡಲು ಯತ್ನಿಸುವುದಿಲ್ಲ. ಹೀಗಾಗಿ ಅವನ್ನು ಮಾಡುವವರು ಎನ್ನವರಲ್ಲ ಎಂದು ಗುರು ಬಸವಣ್ಣನವರು ಸ್ಪಷ್ಟಪಡಿಸಿದ್ದಾರೆ ಈ ವಚನದಲ್ಲಿ)

712. ನಂಟು ಭಕ್ತಿ ನಾಯಕ ನರಕ

ಅಣ್ಣ, ತಮ್ಮ, ಹೆತ್ತಪ್ಪ, ಗೋತ್ರವಾದಡೇನು,
ಲಿಂಗ ಸಾಹಿತ್ಯವಿಲ್ಲದವರ ಎನ್ನವರೆನ್ನನಯ್ಯಾ
ನಂಟು–ಭಕ್ತಿ ನಾಯಕನರಕ, ಲಿಂಗದೇವಾ! –ಬ.ವ.ದೀ–711

ರಕ್ತ ಸಂಬಂಧದೃಷ್ಟಿಯಿಂದ ಅಣ್ಣ, ತಮ್ಮ, ಹೆತ್ತ ತಂದೆಯೇ ಆಗಿರಬಹುದು. ಪೂರ್ವಾಶ್ರಮದ ಗೋತ್ರದವರಾಗಿರಬಹುದು. ಅವರು ಇಷ್ಟಲಿಂಗ ದೀಕ್ಷೆ ಪಡೆದು ಲಿಂಗಧಾರಣೆ ಮಾಡಿಕೊಳ್ಳದಿದ್ದರೆ ಅವರನ್ನು ನನ್ನವರು ಎನ್ನುವುದಿಲ್ಲ. ದೀಕ್ಷಾ ಸಂಸ್ಕಾರ ಪಡೆಯದವರೊಡನೆ ಬಾಂಧವ್ಯ ನಾಯಕ ನರಕಕ್ಕೆ ದೂಡುವುದು.

ಸಾಮಾನ್ಯವಾಗಿ ಮಠಮಾನ್ಯಗಳು ಈ ನಂಟು ಭಕ್ತಿಯಿಂದಲೇ ದುರ್ಬಲಗೊಳ್ಳುವುದು. ಯೋಗ್ಯ ಅಧಿಕಾರಿಗಳನ್ನು ಆರಿಸುವುದಕ್ಕಿಂತಲೂ ತಮ್ಮ ಬಂಧು ಬಳಗದವರನ್ನು, ಎಷ್ಟೋ ಬಾರಿ ಕದ್ದು ಬೆಳೆಸಿದ ತಮ್ಮ ಮಕ್ಕಳನ್ನು –ಅವರಲ್ಲಿ ಅರ್ಹತೆ ಇಲ್ಲದಿದ್ದರೂ ಮಠಪೀಠಾಧಿಕಾರಿಗಳನ್ನಾಗಿ ಮಾಡುವುದರಿಂದ ಅಧ್ಯಾತ್ಮಿಕ ಪರಂಪರೆ ದುರ್ಬಲಗೊಳ್ಳುವುದು."ನಂಟು ಭಕ್ತಿ ನಾಯಕ ನರಕ"ಎಂಬ ಮಾತು ಮಠಾಧೀಶರಿಗೆ ಮತ್ತು ವೈರಾಗ್ಯ ಮೂರ್ತಿಗಳಾದ ಸಾಧಕರಿಗೆ ದಾರಿದೀಪವಾಗಿದೆ.

713. ಇಷ್ಟಲಿಂಗ ಗಣಲಾಂಛನ

ಒಡೆಯರಿಲ್ಲದ ಮನೆಯ ತುಡುಗುಣಿ ನಾಯಿ ಹೊಗುವಂತೆ
ನೀನಿಲ್ಲದವರ ಮನೆಯ ಹೊಗೆನು, ಸಂಗಯ್ಯಾ
ಶ್ವಪಚೋಪಿಗಳಾಗಲಿ, ಲಿಂಗದೇವಯ್ಯಾ,
ನೀನಿದ್ದವನೆ ಕುಲಜನು. –ಬ.ವ.ದೀ. 712

ಮನೆಯ ಮಾಲಿಕರು ಇಲ್ಲದ ಸಮಯ ನೋಡಿಕೊಂಡು ತುಡುಗು ನಾಯಿ ಒಳಗೆ ನುಗ್ಗುತ್ತದೆ. ಹಾಗೆ ಇಷ್ಟಲಿಂಗಧಾರಣೆ ಇಲ್ಲದವರ ಮನೆಯನ್ನು ಹೊಕ್ಕು ವ್ಯವಹರಿಸುವವ ನಾನಲ್ಲ. ಇಷ್ಟಲಿಂಗ ಧಾರಣೆ ಮಾಡಿಕೊಂಡಿರುವುದನ್ನು ಗಮನಿಸಿಯೇ ನಾನು ಅವರೊಡನೆ ವ್ಯವಹರಿಸುವುದು. ಲಿಂಗದೇವಯ್ಯಾ, ಅಂತ್ಯಜರಲ್ಲಿ ಹುಟ್ಟಿದವರಾದರೇನು ಇಷ್ಟಲಿಂಗಧಾರಣೆ ಇದ್ದರೆ ಅವರೇ ಕುಲದಲ್ಲಿ ಅಧಿಕರು; ಗಣಲಾಂಛನವಾದ ಇಷ್ಟಲಿಂಗವೇ ಶರಣ ಸಮಾಜವನ್ನು ಕಟ್ಟುವ ಸೂತ್ರ, ಎಲ್ಲರನ್ನೂ ಬೆಸೆಯುವ ಸಾಧನ.

714. ವಿಪ್ರ ಕರ್ಮದಿಂದ ಬಿಡುಗಡೆ.

ಹೊನ್ನು ಹೆಣ್ಣು ಮಣ್ಣೆಂಬ ಕರ್ಮದ ಬಲೆಯಲ್ಲಿ ಸಿಲುಕಿ,
ವೃಥಾ ಬರುದೊರೆ ಹೋಹ ಕೆಡುಹ ಹಾರುವ ನಾನಲ್ಲ!
ಹಾರುವೆನಯ್ಯಾ ಭಕ್ತರ ಬರವ ಗುಡಿಗಟ್ಟಿ
ಹಾರುವೆನಯ್ಯಾ ಶರಣರ ಬರವ ಗುಡಿಗಟ್ಟಿ,
ಲಿಂಗದೇವನು ವಿಪ್ರ ಕರ್ಮವ ಬಿಡಿಸಿ,
ಅಶುದ್ಧನ ಶುದ್ಧನ ಮಾಡಿದನಾಗಿ ! –ಬ.ವ.ದೀ. 713

ಬ್ರಹ್ಮಜ್ಞಾನವನ್ನು ಪಡೆದವನು ಬ್ರಾಹ್ಮಣ. ಅದನ್ನು ಪಡೆಯದೆ ಹೆಣ್ಣು, ಹೊನ್ನು, ಮಣ್ಣು ಎಂಬ ತ್ರಿವಿಧ ಉಪಾದಿಗಳಲ್ಲಿ ಸಿಲುಕಿಯೂ ತಾನು ಶ್ರೇಷ್ಠ ಎಂದು ಹೇಳಿಕೊಳ್ಳುವುದು ವಿಪರ್ಯಾಸವೇ ಸರಿ. ಕರ್ಮಠಾಚಾರಗಳ ಬಲೆಯಲ್ಲಿ ಒದ್ದಾಡುತ್ತ ಮೂಢ ಆಚರಣೆಗಳ ಸೆಳವಿನಲ್ಲಿ ಸಿಕ್ಕಿರುವ ಕೆಡುಕ ಹಾರುವ ನಾನಲ್ಲ. ನಾನು ಎಂಥ ಹಾರುವನೆಂದರೆ ಭಕ್ತರು ಬರಲೆಂದು ಹಂಬಲ ತುಂಬಿ ಕಾಯುವವನು, ಶರಣರು ಬರುವರೆಂದು ಧ್ವಜಕಟ್ಟಿ ನಿರೀಕ್ಷೆಯಲ್ಲಿ ಇರುವವನು. ನಾನು ನಿಜಕ್ಕೂ ಪುಣ್ಯವಂತ. ಕಂದಾಚಾರಗಳಲ್ಲೇ ಸಿಕ್ಕಿಬಿದ್ದಿರುವ ವಿಪ್ರತ್ವವನ್ನು ಲಿಂಗದೇವನು ಬಿಡಿಸಿದ. ತನ್ನ ಅನುಗ್ರಹ ನೀಡಿ ಅಶುದ್ಧನ ಶುದ್ಧ ಮಾಡಿ ತನ್ನ ದಿವ್ಯ ಪಥಕ್ಕೆ ಕರೆದುಕೊಂಡನು.

715. ಶಾಸ್ತ್ರ ದಾಸ್ಯ ಖಂಡನೆ.

ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ
ತರ್ಕದ ಬೆನ್ನ ಬಾರನೆತ್ತುವೆ,
ಆಗಮದ ಮೂಗ ಕೊಯಿವೆ ನೋಡಯ್ಯಾ
ಮಹಾದಾನಿ ಲಿಂಗದೇವಾ,
ಮಾದಾರ ಚನ್ನಯ್ಯನ ಮನೆಯ ಮಗ ನಾನಯ್ಯಾ
–ಬ.ವ.ದೀ 714

ಅಸಮಾನತೆಯನ್ನು (ಪುರುಷ ಸೂಕ್ತದ ಮೂಲಕ) ಬೋಧಿಸಿ ವರ್ಣಾಶ್ರಮ ವಿಭಜನೆಗೆ ಕಾರಣವಾದ ವೇದಗಳನ್ನು ಒರೆಯಲ್ಲಿ–ಕತ್ತಿಯನ್ನು ಇದುವ ಕವಚ, ಇಡುತ್ತೇನೆ. ಜಾತಿಪದ್ಧತಿಗೆ ಕಾರಣವಾದ ಶಾಸ್ತ್ರಗಳಿಗೆ ಬೇಡಿಯನ್ನಿಕ್ಕಿ ಬಂಧಿಸುತ್ತೇನೆ. ವಿಲಕ್ಷಣವಾದದಿಂದ ಜಾತಿಪದ್ಧತಿಯನ್ನು ಸಮರ್ಥಿಸಿಕೊಳ್ಳುವ ತರ್ಕಕ್ಕೆ ಬೆನ್ನಲ್ಲಿ ಬಾರು ಬರುವಂತೆ ಥಳಿಸುತ್ತೇನೆ. ವೈದಿಕ ಧರ್ಮವನ್ನು ಪೋಷಿಸುವ ಆಗಮ ಶಾಸ್ತಗಳ ಮೂಗನ್ನೇ ಕೊಯ್ಯುವೆ. ಏಕೆ ಗೊತ್ತೆ ? ಪಂಚ ವರ್ಣೀಯರಾದ ಅಂತ್ಯಜರು ಕೀಳು, ಪೂಜೆ ಸಂಸ್ಕಾರಕ್ಕೆ ಅನರ್ಹರು ಎಂದು ಈ ಎಲ್ಲ ಶಾಸ್ತ್ರಗಳು, ವೇದ, ತರ್ಕ, ಆಗಮಗಳು ಸಾರಿ ಸಾರಿ ಹೇಳಿದ್ದಾವೆ. ಆದರೆ ನಿಜವಾಗಿಯೂ ಶಿವನು ಮಾದಾರ ಚನ್ನಯ್ಯನ ಮನೆಯ ಅಂಬಲಿಯನ್ನು ಉಂಡ. ಇದಕ್ಕಿಂತ ಬೇರೆ ಏನು ಘನವಂತಿಕೆ ಇದೆ ? ಈ ಎಲ್ಲ ಘಟನೆ ಎಲ್ಲ ಧರ್ಮಶಾಸ್ತ್ರಗಳು ತಲೆ ತಗ್ಗಿಸುವಂತೆ ಮಾಡುತ್ತದಲ್ಲವೆ ?

716. ಸಾಮರಸ್ಯ

ಆವ ಕುಲವಾದಡೇನು ಇಷ್ಟಲಿಂಗವಿದ್ದವನೆ ಕುಲಜನು !
ಕುಲವನರಸುವರೆ ಶರಣರಲ್ಲಿ, ಜಾತಿಸಂಕರನಾದ ಬಳಿಕ?
ಒಕ್ಕುದ ಕೊಂಬೆನವರಲ್ಲಿ, ಕೂಸ ಕೊಡುವೆ,

ಲಿಂಗದೇವಾ, ನಂಬುವೆ ನಿಮ್ಮ ಶರಣರನು. –ಬ.ವ.ದೀ. 715

ವ್ಯಕ್ತಿಯು ಹುಟ್ಟಿರುವುದು ಯಾವ ಕುಲದಲ್ಲಿ ಆದರೇನು, ಅವನು ಇಷ್ಟಲಿಂಗಧಾರಿಯಾದರೆ ಅವನೇ ಕುಲಜನು. ದೀಕ್ಷೆಯ ನಂತರ ಪೂರ್ವದ ಜಾತಿಗಳು ಅಳಿಯುತ್ತವೆ, ಬೇರೆ ಬೇರೆ ಜಾತಿಯ ಕಟ್ಟಿಗೆಗಳನ್ನು ತಂದು ಬೆಂಕಿಯಲ್ಲಿ ಹಾಕಿದಾಗ ಅವೆಲ್ಲ ಸುಟ್ಟು ಬೂದಿಯಾಗುತ್ತವೆ. ಆ ಬೂದಿಯಲ್ಲಿ ಮಾವಿನ ಬೂದಿ, ಬೇವಿನ ಬೂದಿ ಎಂದು ಹುಡುಕಲು ಸಾಧ್ಯವೆ ? ಹುಡುಕುವುದು ಸಿಂಧುವೆ ? ಹೀಗೆ ಶರಣರಲ್ಲಿ ಪೂರ್ವದ ಕುಲವನ್ನು ಅರಸಬಾರದು. ನಾನು ಅವರಲ್ಲಿ ಸಹಭೋಜನವನ್ನು ಮಾಡುತ್ತೇನೆ ಮತ್ತು ವಿವಾಹ ಸಂಬಂಧವನ್ನು ಮಾಡುತ್ತೇನೆ. ಹೆಣ್ಣು, ಗಂಡನ್ನು ಕೊಡುವ ಕೊಳ್ಳುವ ಕ್ರಿಯೆಯನ್ನು ಮಾಡುತ್ತೇನೆ. ಲಿಂಗದೇವಾ, ನೀ ಸಾಕ್ಷಿಯಾಗಿ ಶರಣರಲ್ಲಿ ಪೂರ್ವದ ಜಾತಿಗಳಳಿದು ಎಲ್ಲರೂ ಸಮಾನರು ಎಂಬುದನ್ನು ನಂಬುತ್ತೇನೆ.

717. ಸಮಾನತೆ

ಕಳ್ಳ, ಬಂದಿಕಾರ, ಹಾವಾಡಿಗ, ಹಾದರಿಗ
ಬಂಟನೋಲೆಯಕಾರನೆಂದೆನಾದಡೆ;
ನೀ ಮುಂತಾಗಿ ಬಂದ ಭಕ್ತರ ನೀ ಎನ್ನದಿದ್ದಡೆ, ಅದೇ ದ್ರೋಹ!
ನಡೆ ನುಡಿ ಹುಸಿಯುಂಟಾದಡೆ,
ಲಿಂಗದೇವನ ತೋರಿದ ಚನ್ನಬಸವಣ್ಣನಾಣೆ. –ಬ.ವ.ದೀ 716

ದೀಕ್ಷಾಪೇಕ್ಷಿಗಳಾಗಿ ಬಂದವರು ಯಾವುದೇ ಕುಲದವರಿರಲಿ ಯಾವುದೇ ಉದ್ಯೋಗದವರಿರಲಿ ಎಂತಹ ನೈತಿಕ ಮಟ್ಟ ಇರುವವರಾಗಲಿ ಅವರು ಬಯಸಿ ಬೇಡಿದಾಗ ನಿರಾಕರಿಸದೆ ದೀಕ್ಷೆಯನ್ನು ನೀಡುವೆ. ಏಕೆಂದರೆ ದೀಕ್ಷಾ ನಂತರ, ಶರಣರ ಸಂಗದ ಫಲವಾಗಿ ಅವರಲ್ಲಿ ಬದಲಾವಣೆ ಕಾಣಬಹುದು. ಮೊದಲೇ ದೀಕ್ಷೆಯನ್ನು ನಿರಾಕರಿಸುವುದು ಮಾನವತೆಗೆ ಮಾಡುವ ಅಪಚಾರವಲ್ಲವೆ? ಕಳ್ಳ ಮತ್ತು ಹಾದರಿಗರು ವೈಯಕ್ತಿಕ ದೌರ್ಬಲ್ಯದಿಂದ ಹಾಗೆ ಆದವರು. ಬಂದಿಕಾರ ಅಂದರೆ ಕಾರಾಗೃಹದಲ್ಲಿ ಅಪರಾಧಿಗಳನ್ನು ಕಾಯುವವ, ಹಾವನ್ನು ಆಡಿಸುವ ಹಾವಾಡಿಗ, ಬಂಟ ಅಂದರೆ ಸೇವಕ, ಓಲೆಯಕಾರ–ಪತ್ರ ತಲುಪಿಸುವ ಸಂದೇಶ ವಾಹಕ ಮುಂತಾದವರು ಆಯಾ ಉದ್ಯೋಗ ಮಾಡುವವರು. ಅವರು ದೀಕ್ಷೆ ಪಡೆದುಕೊಂಡು ಅಂಗದ ಮೇಲೆ ಇಷ್ಟಲಿಂಗ ಧರಿಸಿಕೊಂಡು ಬಂದಾಗ ಅವರಲ್ಲಿ ಮೇಲು–ಕೀಳು ಎಂದೆಣಿಸದೆ ಸಮಾನವಾಗಿ ಕಾಣುವೆ, ಹಾಗೆ ಕಾಣದಿದ್ದರೆ ಅದೇ ದ್ರೋಹ. ನಾನು ನುಡಿದಂತೆ ನಡೆದುಕೊಳ್ಳುತ್ತೇನೆ. ಚನ್ನಬಸವಣ್ಣ ನಾಣೆಯಾಗಿಯೂ ನುಡಿ ನಡೆಯಲ್ಲಿ ವ್ಯತ್ಯಾಸ ತೋರುವುದಿಲ್ಲ. ಧರ್ಮಕ್ಕೆ ಅಧ್ಯಾತ್ಮಿಕ ಮುಖ ಆಂತರಂಗಿಕ (Inward) ವಾದರೆ ಸಾಮಾಜಿಕ ಮುಖ ಬಹಿರಂಗಿಕ (Outward). ಅಧ್ಯಾತ್ಮಿಕ ರಂಗದಲ್ಲಿ, ಅಧ್ಯಾತ್ಮಿಕ ವ್ಯಕ್ತಿಗಳಲ್ಲಿ ಕಾಣಬಹುದಾದ ಪರಿಶುದ್ಧತೆಯನ್ನು ಎಲ್ಲ ಸ್ತರದ ಜನರಲ್ಲಿ ನಿರೀಕ್ಷಿಸಲು ಸಾಧ್ಯವಿಲ್ಲ. ಧರ್ಮವು ಎಲ್ಲರಿಗೂ ಅಗತ್ಯವಿರುವ ಕಾರಣ ವ್ಯಕ್ತಿಯಲ್ಲಿ ಆಂತರಂಗಿಕ ಪರಿವರ್ತನೆ ನಿರೀಕ್ಷಿಸಿ ದೀಕ್ಷೆಯನ್ನು ಎಲ್ಲರಿಗೂ ಗುರು ಬಸವಣ್ಣನವರು ಕೊಡುವ ಅವಕಾಶ ಒದಗಿಸಿದರು. ವ್ಯಕ್ತಿಯ ಕಾಯಕವೂ ಧರ್ಮಸಂಸ್ಕಾರಕ್ಕೆ ಅಡ್ಡಿಯಾಗಬಾರದೆಂಬುದು ಅವರ ಆಲೋಚನೆ ಇದ್ದಂತೆ ತೋರುತ್ತದೆ

718. ಮತಾಂತರಿಗಳ ಬಗ್ಗೆ ಮರುಕ

ಎಡದ ಕೈಯಲಿ ಕತ್ತಿ, ಬಲದ ಕೈಯಲ್ಲಿ ಮಾಂಸ,

ಬಾಯಲ್ಲಿ ಸುರೆಯ ಗಡಿಗೆ, ಕೊರಳಲ್ಲಿ ದೇವರಿರಲಿ
ಅವರ ಲಿಂಗವೆಂಬೆ, ಸಂಗನೆಂಬೆ
ಲಿಂಗದೇವಾ, ಅವರ ಮುಖಲಿಂಗಿಗಳೆಂಬೆ! –ಬವದೀ 717

ಈ ವಚನ ಬಹುವಿಲಕ್ಷಣವಾಗಿದ್ದು ಅಹಿಂಸೆಯನ್ನು, ಸದಾಚಾರವನ್ನು ಬೋಧಿಸುವ ಗುರು ಬಸವಣ್ಣನವರ ವಿಚಾರಧಾರೆಗೆ ವ್ಯತಿರಿಕ್ತವಾಗಿದೆ. ಹೀಗಾಗಿ ಬರಹಗಾರರು ಬಗೆಬಗೆಯ ವ್ಯಾಖ್ಯಾನ ಮಾಡುವರು. ಮಾಂಸಾಹಾರ ಮಾಡಿದರೂ ಚಿಂತೆಯಿಲ್ಲ, ಇಷ್ಟಲಿಂಗ ಧರಿಸಬಹುದು; ಮಾಂಸಾಹಾರಿಗಳಿಗೂ ಇಷ್ಟಲಿಂಗ ದೀಕ್ಷೆ ನೀಡಬಹುದು ಎಂದು ವ್ಯಾಖ್ಯಾನಿಸುತ್ತಾರೆ. ಗುರು ಬಸವಣ್ಣನವರದು ಅಹಿಂಸಾತ್ಮಕ ಧರ್ಮ. "ಕೊಲ್ಲೆನಯ್ಯಾ ಪ್ರಾಣಿಗಳ ಮೆಲ್ಲೆನಯ್ಯ ಬಾಯಿಚ್ಚೆಗೆ." "ಅಂಗದಿಚ್ಚೆಗೆ ಮದ್ಯ ಮಾಂಸವ ತಿಂಬರು, ಕಂಗಳಿಚ್ಚೆಗೆ ಪರವಧುವ ನೆರೆವರು! ಲಿಂಗಲಾಂಛನಧಾರಿಯಾದಲ್ಲಿ ಫಲವೇನು ಲಿಂಗಪಥವ ತಪ್ಪಿ ನಡೆವವರು." ಎಂದು ಬೇರೆಡೆ ಹೇಳಿದ್ದಾರೆ.

ಗುರು ಬಸವಣ್ಣನವರು ಧರ್ಮದ ಹೆಬ್ಬಾಗಿಲನ್ನು ಎಲ್ಲರಿಗೂ ತೆರೆದಾಗ ಶೂದ್ರರು ಮತ್ತು ದಲಿತರು ಹೆಚ್ಚಿನ ಸಂಖ್ಯೆಯಲ್ಲಿ ಒಳಬಂದರು. ಆರಂಭದ ದಿನಗಳಲ್ಲಿ ಮೇಲ್ಜಾತಿಯವರು ಹೆಚ್ಚಾಗಿ ಬರಲಿಲ್ಲ. ಶರಣರ ಹೆಸರುಗಳನ್ನು ನೋಡಿದಾಗ ಇದು ಮನದಟ್ಟಾಗುತ್ತದೆ ಹಾಗೆ ಬಂದವರು ಮಾಂಸಾಹಾರ, ಮದ್ಯಪಾನ ಬಿಡಲು ಬಹಳ ಪ್ರಯತ್ನ ಮಾಡಬೇಕಾಗುತ್ತಿತ್ತು. ಚನ್ನಬಸವಣ್ಣ, ಪ್ರಭುದೇವರು ತೀವ್ರಗತಿಯ ಬದಲಾವಣೆ ನಿರೀಕ್ಷಿಸುವವರು. ಗುರು ಬಸವಣ್ಣನವರು ಮಾತೃ ಹೃದಯಿ, ಹೆಚ್ಚಿನ ಕಾಲಾವಕಾಶ ಕೊಡಬೇಕು ಎನ್ನುವವರು ಅವರು ಹೀಗೆ ಹೇಳುತ್ತಾರೆ, "ಎಡದ ಕೈಯಲ್ಲಿ ಕತ್ತಿ ಹಿಡಿದಿದ್ದಾನೆ, ಬಲದ ಕೈಯಲ್ಲಿ ತಾನು ಬೇಟೆಯಾಡಿದ ಪ್ರಾಣಿಯ ಮಾಂಸ ಹಿಡಿದಿದ್ದಾನೆ, ಬಾಯಿಯಲ್ಲಿ ಸುರೆಯ ಗಡಿಗೆ ಕಾಣಬರುತ್ತಿದೆ. ಆದರೆ ಕೊರಳಲ್ಲಿ ಇಷ್ಟಲಿಂಗವಿದೆ. ಪಾಪದ ಮಧ್ಯದಲ್ಲಿ ಒಂದು ಪುಣ್ಯದ ಇಡುಗಂಟು ಇರಲಿ; ಒಮ್ಮೆಗೇ ಅವನ ಮೇಲೆ ಕ್ರಮ ತೆಗೆದುಕೊಂಡು ಬಹಿಷ್ಕಾರ ಹಾಕುವುದು ಬೇಡ. ಶರಣರ ಸಂಗದಲ್ಲಿ ಒಡನಾಡುತ್ತ ಹೋದಂತೆ ಸದಾಚಾರಿಯಾಗುವನು. ತೀವ್ರ ಪ್ರತಿಕ್ರಿಯೆ ತೋರಿಸಿದರೆ ಆ ಲಿಂಗವನ್ನೂ ತೆಗೆದು ಹಾಕಿ ಪೂರ್ವಾಶ್ರಮಕ್ಕೆ ಹೋಗಿಬಿಡುವನು. ಆದ್ದರಿಂದ ತಾಳ್ಮೆಯಿಂದ ಅವನನ್ನು ತಿದ್ದೋಣ" ಎನ್ನುತ್ತಾರೆ. ಈ ರೀತಿ ಹೇಳುವುದರಲ್ಲಿ ಮಾನವೀಯ ಚಿಂತನೆ ಕಾಣಬರುತ್ತಿದೆ.

719. ಅಧ್ಯಾತ್ಮಿಕ ಕಿರುಕುಳ

ಗುಮ್ಮಡಿಯಂತಪ್ಪ ತಾಯಿ ನೋಡೆನಗೆ,
ಕಲಕೇತನಂತಪ್ಪ ತಂದೆ ನೋಡೆನಗೆ,
ಮೋಟನಂತಪ್ಪ ಗಂಡ ನೋಡೆನಗೆ!
ಮರಗಾಲಲಟ್ಟಟ್ಟಿ ಸದೆದು ನೋಡಯ್ಯಾ
ಇಂದೆನ್ನ ಒಕತನ ಹೋದಡೆ ಹೋಗಲಿ–
ಮರಗಾಲ ಬಿಟ್ಟೆನಾದಡೆ
ಕೂಡಲ ಸಂಗಮದೇವಾ, ನಿಮ್ಮಾಣೆ! –ಬ.ವ.ದೀ 718.

"ಹೆಣ್ಣು ಪಿಶಾಚಿಯಂತಹ ತಾಯಿ, ಗಂಡು ಪಿಶಾಚಿಯಂತಹ ತಂದೆ, ಕೈಯಿಲ್ಲದ ಮೋಟನಂತಹ ಮಗ ಪಿಶಾಚಿ ಗಂಡ. ಇವು ಮರಗಾಲು ಕಟ್ಟಿಕೊಂಡು ಸಂಚರಿಸುತ್ತ ಅದರಲ್ಲಿ ನನ್ನನ್ನು ಒದೆಯುತ್ತಾರೆ. ಆದರೂ ನಾನು ಈ ಒಕತನ ಅರ್ಥಾತ್ ಬಾಳ್ವೆಯನ್ನು ತೊರೆಯುವುದಿಲ್ಲ.

ಇದು ನಿಮ್ಮಾಣೆಯಾಗಿಯೂ ಸತ್ಯ!" ಲೌಕಿಕ ಸಂಸಾರ ಸೀಮಿತವಾದುದು. ಗಂಡ–ಹೆಂಡತಿ–ಮಕ್ಕಳಿಗೆ ಸೀಮಿತ. ಆದರೆ ಪಾರಮಾರ್ಥಿಕ ಸಂಸಾರ ವಿಸ್ತಾರ. ಅದರಲ್ಲಿಯೂ ಮಹಾಮನೆ, ಅನುಭವ ಮಂಟಪ, ದಾಸೋಹ, ಶರಣರ ನಿರ್ವಹಣೆ ಅಸಾಮಾನ್ಯ ಲೋಕ ಸಂಸಾರ. ಇಂಥವರ ಮಧ್ಯೆ ಬಗೆಬಗೆಯ ಸಮಸ್ಯೆ, ಕಿರುಕುಳ, ನಿಂದೆ ಇದ್ದೇ ಇರುತ್ತದೆ. ಕೇವಲ ಅಧ್ಯಾತ್ಮಿಯಾಗಿ ತನ್ನ ಪಾಡಿಗೆ ತಾನು ತಪಸ್ಸು ಮಾಡುವವರಿಗೆ ಹೆಚ್ಚಿನ ನಿಂದೆ, ಕಿರುಕುಳ ಇರುವುದಿಲ್ಲ. ಸಮಾಜವನ್ನು ಒಟ್ಟಿಗೆ ತೆಗೆದುಕೊಂಡು ಹೋಗಬೇಕು ಎನ್ನುವವರಿಗೆ ಕಿರುಕುಳ ಜಾಸ್ತಿ. ಮರಗಾಲಲ್ಲಿ ಒದೆದಂತಹ ಬಾಧೆ. ಏನೇ ಆದರೂ ಈ ಲೋಕ ಸಂಸಾರದ ಒಗೆತನವನ್ನು ಬಿಡುವುದಿಲ್ಲ, ಸಮಾಜ ಪರಿವರ್ತನೆಯ ಕೆಲಸವನ್ನು ಮುಂದುವರಿಸುವೆ ಎಂದು ಗುರು ಬಸವಣ್ಣನವರು ಹೇಳುತ್ತಾರೆ,

720.ದಾಸೋಹದಿಂದ ತ್ರಿವಿಧ ಶುದ್ಧಿ

ತನುವ ಬಂದಲೆವರಯ್ಯಾ ಎನ್ನ, ಮನವ ಬಂದು ನೋಡುವರಯ್ಯಾ.
ಎನ್ನ ಧನವ ಬಂದು ಸೂರೆಗೊಂಬರಯ್ಯಾ ಜಂಗಮವನವರತ!
ಲಿಂಗದೇವಾ,
ನಿಮ್ಮ ಬಯಕೆಯ ಭಂಡಾರಕ್ಕೆ ನಾನು ಶುದ್ಧನಯ್ಯಾ –ಬವದೀ 719

ಜಂಗಮರು (ಶರಣರು) ನನ್ನ ತನುವನ್ನು ದಣಿಯುವಂತೆ ಕಾಡಿಸುವರು. ನನ್ನ ಮನಸ್ಥೈರ್ಯವನ್ನು ಪರೀಕ್ಷಿಸುವರು, ನಮ್ಮ ಸಂಪತ್ತನ್ನು ತಮಗೆ ಅಗತ್ಯವಿರುವಂತೆ ಬಳಕೆ ಮಾಡಿಕೊಳ್ಳುವರು. ಇದೆಲ್ಲ ಲಿಂಗದೇವಾ, ನಿಮ್ಮ ಅಪೇಕ್ಷೆಯಂತೆ ನಡೆಯುವುದು ಎಂದುಕೊಂಡು ಅರ್ಪಿಸಿ ನಾನು ಶುದ್ಧನಾಗುತ್ತೇನೆ, ಸ್ವಲ್ಪವೂ ಬೇಸರಿಸಿಕೊಳ್ಳುವುದಿಲ್ಲ.

721.ದೇವನ ಅಧೀನ

ಕಲಿ ಕರುಳ ತರ್ಕೈಸಿ ಹರಿಯಬಲ್ಲನಲ್ಲದೆ–
ಸಾಯ ಕಾದಿಸುವಡೆ, ಎಡೆಗೋಲನಿಕ್ಕುವಡೆ, ದಾತಾರನಾಧೀನವಲ್ಲದೆ–
ಲಿಂಗದೇವಾ, ನೀ ಮಾಡಿದಂತಹುದಯ್ಯಾ;
ತನುಮನಧನದಲ್ಲಿ ವಂಚನೆಯ
ಆನು ಬಯಸಿದಡೆಂತಹುದಯ್ಯಾ? –ಬ.ವ.ದೀ 720

ಶೂರನಾದ ಸೈನಿಕನು ಕಡೆಯವರೆಗೂ ಹೋರಾಡುವನು, ಯುದ್ಧ ಭೂಮಿಯಲ್ಲಿ ಹಿಮ್ಮೆಟ್ಟುವುದಿಲ್ಲ. ತನ್ನ ಕರುಳು ಹೊರಬಂದಿದ್ದರೂ ಹೆದರದೆ ಯುದ್ಧ ಮಾಡುವನು. ಸಾಯುವವರೆಗೂ ಹೋರಾಡುವನು, ಆತ್ರುವಿಗೆ ಎಡಗೋಲನಿಕ್ಕುವನು. ಎಲ್ಲವೂ ದಾತಾರನಾದ ದೇವನ ಅಧೀನ ಎಂದು ಭಾವಿಸುವನು. ಹಾಗೆ ನಾನೂ ಸಹ ತನುಮನ ಧನದಲ್ಲಿ ವಂಚನೆಯ ಮಾಡದೆ ನನ್ನನ್ನು ನಾನು ಸಮರ್ಪಿಸಿಕೊಂಡು ದುಡಿಯುವೆನು ಲಿಂಗದೇವಾ, ನೀನು ಮಾಡಿದಂತೆ, ನಡೆಸಿದಂತೆ ಎಲ್ಲವೂ ನಡೆಯುವುದು.

722.ದೇವನ ಲೀಲೆ

ಬಾಲಾಭ್ಯಾಸವ ಮಾಡಹೋದಡೆ ಎನ್ನ ಸುರಗಿ ಎನ್ನ ನಟ್ಟಿತ್ತು
ಎಂತಯ್ಯಾ ಕಲಿಯೊಡನೆ ಶ್ರವವ ಮಾಡುವೆನು?
ರಾಯ ರಾಜಗುರು ಜಗದ ಬಿನ್ನಾಣಿಯ ತೊಡಕ ಬಿಡಿಸಬಾರದು:

ಸರಿಸದ ಮೇಲೆ ಮಸಿಯ ತೋರಿದ ಲಿಂಗದೇವ. –ಬ.ವ.ದೀ. 721

ಬಾಲಕರು ಕತ್ತಿವರಸೆ ಮುಂತಾಗಿ ಕಲಿಯುವಾಗ ಆಯತಪ್ಪಿ ಏಟುಬಿದ್ದು ಗಾಯವಾಗುವ ಸಂಭವವಿರುತ್ತದೆ. ಹಾಗೆ ನಾನೂ ಅಭ್ಯಾಸ ಮಾಡುವಾಗ ನನ್ನ ಕೈಯೊಳಗಣ ಕತ್ತಿ ನನಗೇ ನೆಡುವಂತೆ ನಾನು ಹಾಕಿಕೊಂಡ ತ್ರಿವಿಧ ದಾಸೋಹ. ಒಬ್ಬ ಶೂರನೊಡನೆ ಯುದ್ಧ ಮಾಡುವುದು ಹೇಗೆ ಸಾಧ್ಯವಿಲ್ಲವೋ ಹಾಗೆ ದೇವನೊಡನೆ ಪರೀಕ್ಷೆಯಲ್ಲಿ ತೊಡಗುವುದು ಅಸಾಧ್ಯ. ದೇವರು ಬಿನ್ನಾಣಿ; ಬಗೆಬಗೆಯ ತೊಡಕನ್ನು ನಮ್ಮ ಪರೀಕ್ಷೆಗಾಗಿ ಸೃಷ್ಟಿಸುವನು. ನಾವು ಕೈಗೊಳ್ಳುವ ಸವಾಲನ್ನು ಹುಸಿಗೊಳಿಸಲು ಪ್ರಯತ್ನಿಸುವನು. ಕತ್ತಿಯ ಮುಂಭಾಗ (ಸರಿಸ)ದಲ್ಲಿ ಹಿಡಿದು ಸೆಣಸಹೋದರೆ ಚದುರಂಗ (ಪಗಡೆ) ದಾಟವನ್ನು ದೇವನು ಆಡುವನು.

[ವಿ.ಸೂ: ವಚನವು ಸರಿಯಾಗಿ ಅರ್ಥವಾಗುತ್ತಿಲ್ಲ. ಒಂದು ಪ್ರಯತ್ನ ಮಾಡಲಾಗಿದೆ, ಸಮಾಧಾನವಾಗಿಲ್ಲ]

723. ಜಂಗಮ ಭಕ್ತಿ

ಸಮಚಿತ್ತವೆಂಬ ನೇಮದ ಹಲಗೆಯ ಹಿಡಿದು
ಶಿವಚಿತ್ತವೆಂಬ ಕೂರಲಗ ಕೊಂಡು
ಶರಣಾರ್ಥಿಯೆಂಬ ಶ್ರವವ ಕಲಿತಡೆ
ಆಳುತನಕ್ಕೆ ದೆಸೆಯಪ್ಪೆ ನೋಡಾ
ಮಾರಂಕ ಜಂಗಮ ಮನೆಗೆ ಬಂದಲ್ಲಿ ಇದಿರೆದ್ದು ನಡೆವುದು
ಲಿಂಗದೇವರನೊಲಿಸುವಡಿದು ಚಿಹ್ನ! –ಬ.ವ.ದೀ 722

ಯುದ್ಧದಲ್ಲಿ ಅತಿ ಮುಖ್ಯವಾದ ಆಯುಧ ಕತ್ತಿ. ಎದುರಾಳಿಯ ಕತ್ತಿಯ ಏಟು ಬೀಳದಂತೆ ತಡೆಯಲು ಇರುವ ಸಾಧನ ಗುರಾಣಿ. ಸುಖದುಃಖಗಳಲ್ಲಿ ಏರಿಳಿತವಾಗದಂತಹ ಸಮಚಿತ್ತ ಎಂಬ ಹಲಗೆ–ಗುರಾಣಿಯನ್ನು, ಎಲ್ಲವೂ ಶಿವಚಿತ್ತ ಎಂದು ಭಾವಿಸುವ ಶರಣಾಗತ ಭಾವ ಎಂಬ ಕತ್ತಿಯನ್ನು ಹಿಡಿದುಕೊಂಡು ಶರಣಾರ್ಥಿ ಎಂಬ ಯುದ್ಧವನ್ನು ಮಾಡಲು ಕಲಿತರೆ ಶರಣನಿಗೆ ಜಯ ಕಟ್ಟಿಟ್ಟದ್ದು. ನಿಜವಾದ ಆಳುತನ, ಶರಣತ್ವ ಎಂದರೆ ಇದೆ. ಶರಣತ್ವದ ಮುಖ್ಯ ಲಕ್ಷಣ ಕಿಂಕರತೆ. ಜಂಗಮ ಒಂದು ರೀತಿಯಲ್ಲಿ ನಮ್ಮ ಶತ್ರು (ಮಾರಂಕ), ನಮ್ಮ ಶೌರ್ಯವನ್ನು ಪರೀಕ್ಷಿಸಲು ಎದುರಾಳಿ ಬರುವಂತೆ ನಮ್ಮ ವ್ಯಕ್ತಿತ್ವ ಪರೀಕ್ಷಿಸಲು ಜಂಗಮ ಬರುತ್ತಾನೆ. ಹಾಗೆ ಜಂಗಮ ಬಂದಾಗ ಕುಳಿತಲ್ಲೇ ಸ್ವಾಗತಿಸುವುದಾಗಲಿ, ಹೂಂಕರಿಸುವುದನ್ನಾಗಲಿ ಮಾಡದೆ ಇದಿರೆದ್ದು ಹೋಗಿ ಶರಣಾರ್ಥಿ ಮಾಡಿ ಸ್ವಾಗತಿಸಬೇಕು. ಲಿಂಗದೇವನನ್ನೊಲಿಸಲು ಈ ವಿನಯವೇ ಸಾಧನ; ಕುರುಹು (ಚಿಹ್ನ)!

724. ಕಾದುವೆನೇ ಹೊರತು ಓಡುವುದಿಲ್ಲ

ಅಟ್ಟಾಟಿಕೆಯ ಮಾತನಾಡಲದೇಕೋ?
ಮುಟ್ಟಿಬಂದುದಕ್ಕಂಜಲದೇಕೋ?
ಕಾದಿದಲ್ಲದೆ ಮಾಣೆನು, ಓಡಿದಡೆ ಭಂಗ ಹಿಂಗದಾಗಿ
ಲಿಂಗದೇವಾ, ಎನ್ನ ಭಂಗ ನಿಮ್ಮದಾಗಿ! –ಬ.ವ.ದೀ 723.

ಅಟ್ಟಾಟಿಕೆಯ ಮಾತು ಎಂದರೆ ಪೌರುಷದ ಮಾತು, ಕೊಚ್ಚಿಕೊಳ್ಳುವ ಮಾತು

ಆಡಲದೇಕೆ? ತೊಂದರೆ ಬಂದಾಗ ಅಂಜಿಕೊಳ್ಳಲದೇಕೆ? ತಾನು ದೊಡ್ಡ ದಾನಿ ಎಂದು ಹೊಗಳಿಕೊಳ್ಳುವುದು; ಇದನ್ನು ನೋಡಿ ಯಾರಾದರೂ ದಾನ ಕೇಳಿದರೆ ಇಲ್ಲದ ಸಬೂಬು ಹೇಳಿ ತಪ್ಪಿಸಿಕೊಳ್ಳುವುದು ಇಂಥ ಪೊಳ್ಳುತನವೇಕೆ? ಗುರು ಬಸವಣ್ಣನವರಿಗೆ ಇಂಥ ಒಳಲೊಟ್ಟೆತನ ಇಷ್ಟವಾಗದು. ಅದಕ್ಕೆ ಹೇಳುವರು, "ಕಾದಿದಲ್ಲದೆ ಬಿಡೆನು; ಜೀವನದ ಸಂಕಷ್ಟಗಳಿಗೆ ಬೆನ್ನು ತೋರಿಸಿ ಓಡಿದರೆ ಅಭಿಮಾನಕ್ಕೆ ಚ್ಯುತಿ, ಹೇಡಿ ಪಲಾಯನವಾದಿ ಎಂಬ ಬಿರುದು. ಲಿಂಗದೇವಾ ಕೆಟ್ಟ ಹೆಸರು ಬರುವುದು ನಿನಗೆ, ದೇವನ ಭಕ್ತನಂತೆ ಬದುಕಿನ ಸಂಕಷ್ಟವನ್ನು ಎದುರಿಸಲಾರದಾದ ಎಂದು ಜನರು ನಿನ್ನನ್ನು ದೂಷಿಸುವಂತೆ ಮಾಡಲಾರೆ" ಎಂದು.

725.ತನು–ಮನ–ಧನಗಳ ಮೀಸಲು

ಲಿಂಗಕ್ಕಲ್ಲದೆ ನೀಡೆನೀ ಮನವನು
ಜಂಗಮಕ್ಕಲ್ಲದೆ ಮಾಡೆನೀ ಧನವನು,
ಪ್ರಸಾದಕ್ಕಲ್ಲದೆ ಮಾಡೆನೀ ತನುವನು
ಲಿಂಗ ಜಂಗಮ ಪ್ರಸಾದಕ್ಕಲ್ಲದೆ ಬಾಯ್ದೆರೆಯೆನೆಂಬುದೆನ್ನ ಭಾಷೆ
ಅನರ್ಪಿತವಾದಡೆ ತಪ್ಪೆನ್ನದು
ಮೂಗ ಕೊಯಿ, ಲಿಂಗದೇವಾ –ಬ.ವ.ದೀ 724.

"ಲಿಂಗದೇವಾ, ನನ್ನ ಮನ ನಿನಗೆ ಮೀಸಲು, ಪತಿವ್ರತೆ ತನುಮನಗಳೆಲ್ಲವನ್ನೂ ಪತಿಗಾಗಿ ಮೀಸಲಿಡುವಂತೆ ಶರಣ ಸತಿಯಾಗಿ ಲಿಂಗಪತಿಯಾದ ನಿನಗೆ ನನ್ನನ್ನು ಅರ್ಪಿಸಿಕೊಂಡಿದ್ದೇನೆ. ನನ್ನ ಸಂಪತ್ತು ಜಂಗಮಕ್ಕೆ ಮೀಸಲು; ಅಪಾತ್ರ ದಾನವನ್ನು ಎಂದೂ ಮಾಡುವುದಿಲ್ಲ. ನನ್ನ ಶರೀರವು ಪ್ರಸಾದ ಸ್ವೀಕಾರವನ್ನು ಬಿಟ್ಟು ಅನ್ಯವನ್ನು ಮಾಡದು. ಲಿಂಗ ಪ್ರಸಾದ ಜಂಗಮ ಪ್ರಸಾದಕ್ಕಲ್ಲದೆ ಅನ್ಯ ದೈವ ಪ್ರಸಾದಕ್ಕೆ ಬಾಯಿ ತೆರೆಯದು. ಈ ಭಾಷೆಗೆ ಚ್ಯುತಿ ತರುವಂತೆ ನಾನು ನಡೆದುಕೊಂಡು ಅರ್ಪಣೆಯಲ್ಲಿ ಲೋಪ ತಂದುಕೊಂಡರೆ ನನ್ನ ಮೂಗು ಕೊಯ್ದು ಶಿಕ್ಷಿಸು"

4. ಮಾಹೇಶ್ವರನ ಪ್ರಸಾದಿಸ್ಥಲ

726. ಭೃತ್ಯಾಚಾರ

ಅಂಕ ಕಂಡಾ, ಕೋಲಾಸೆ ಮತ್ತೇಕಯ್ಯಾ?
ಲೆಂಕ ಕಂಡಾ; ಪ್ರಾಣದಾಸೆ ಮತ್ತೇಕಯ್ಯಾ?
ಭಕ್ತ ಕಂಡಾ; ತನುಮನಧನದಾಸೆ ಮತ್ತೇಕಯ್ಯಾ?
ನಿಮ್ಮ ಅಂಕೆಗೆ ಝುಂಕೆಗೆ ಶಂಕಿಸಿದೆನಾದಡೆ
ಎನ್ನ ಲೆಂಕತನಕ್ಕೆ ಹಾನಿ, ಲಿಂಗದೇವಾ! –ಬ.ವ.ದೀ 725

"ಶೂರನೇ, ಅವನಿಗೆ ಆಯುಧದ ಹಂಗೇನಿದೆ? ಲೆಂಕನೇ ಅವನಿಗೆ ಪ್ರಾಣದ ಆಸೆಯೇ ಇರಬಾರದು. ಹಾಗೆ ತನ್ನನ್ನು ತಾನು ದೇವನಿಗೆ ಅರ್ಪಿಸಿಕೊಂಡು ಶರಣಾದ ಶರಣನಿಗೆ ತನು ಮನ ಧನಗಳ ಮೇಲೆ ಆಸೆ ಇರಬಾರದು. ಲಿಂಗದೇವಾ, ನೀವು ಮಾಡುವ ಪರೀಕ್ಷೆ, ಕೊಡುವ ಸಂಕಷ್ಟಗಳಿಂದ ನಿಮ್ಮ ಮೇಲೆ ಶಂಕೆಯನ್ನು ತಾಳಿದೆನಾದರೆ ನನ್ನ ಸೇವಾವ್ರತಕ್ಕೆ ಚ್ಯುತಿ ಬರುತ್ತದೆ." ಶೂರನಾದವನಿಗೆ ಏನಾದರೂ ತೊಂಧರೆ ಅಥವಾ ಹೋರಾಟ ಎದುರಾದರೆ ಅವನು ಕೋಲು, ಕತ್ತಿ, ಗದೆ ಮುಂತಾದ ಆಯುಧಗಳನ್ನು ಹುಡುಕುತ್ತಾ ಹೊತ್ತು ಗಳೆಯುವುದಿಲ್ಲ. ತನ್ನ ಮುಷ್ಟಿಯ

ಬಲದಿಂದಲಾದರೂ ಶತ್ರುವನ್ನು ಎದುರಿಸುವನು. ಲೆಂಕ ಒಬ್ಬ ವ್ರತಧಾರಿ; ಒಬ್ಬ ರಾಜನಿಗೋ ಒಬ್ಬ ಒಡೆಯನಿಗೋ ತನ್ನನ್ನು ತಾನು ಸಮರ್ಪಿಸಿಕೊಂಡು ಬಿಡುತ್ತಾನೆ. ಒಡೆಯನ ಪ್ರಾಣರಕ್ಷಣೆ ಅವನಿಗೆ ಮುಖ್ಯ. ಇದಕ್ಕೊಂದು ಸುಂದರ ದೃಷ್ಟಾಂತವಿದೆ. ಒಬ್ಬ ರಾಜನಿಗೆ ಅಂಗರಕ್ಷಕರನ್ನು ನೇಮಿಸಬೇಕಿತ್ತು. ಪ್ರಧಾನ ಮಂತ್ರಿ ಪರೀಕ್ಷೆಗಳನ್ನಿಟ್ಟ, ಎಲ್ಲ ಪರೀಕ್ಷೆಗಳಲ್ಲಿ ಜಯಗಳಿಸಿ ಇಬ್ಬರು ಅಂತಿಮವಾಗಿ ಕಣದಲ್ಲಿ ಉಳಿದರು. ಅದರಲ್ಲಿ ಒಬ್ಬನನ್ನು ಲೆಂಕನನ್ನಾಗಿ ಮಾಡಬೇಕಿತ್ತು. ಆಗ ಪ್ರಧಾನಿ ಒಂದು ಪ್ರಶ್ನೆ ಕೇಳಿದ, "ಶತ್ರುವೊಬ್ಬ ನಿಮ್ಮ ರಾಜನನ್ನು ಸೆರೆ ಹಿಡಿದಿದ್ದಾನೆ ಎಂದುಕೊಳ್ಳುವಾ ಆಗ ನೀವು ಏನು ಮಾಡುತ್ತೀರಿ?" ಒಬ್ಬ ಉತ್ತರಿಸಿದ, "ನಾನು ಹೋಗಿ ಯುದ್ಧ ಮಾಡಿ ಬಿಡಿಸಿಕೊಂಡು ಬರುತ್ತೇನೆ." ಇನ್ನೊಬ್ಬ ಹೇಳಿದ, "ನನ್ನ ಪ್ರಾಣ ಇರುವವರೆಗೆ ರಾಜನನ್ನು ಬಂಧಿಸಲು ನಾನು ಅವಕಾಶ ಕೊಡುವುದಿಲ್ಲ. ರಾಜನ ಬಂಧನವಾಗಿದೆ ಎಂದರೆ ನನ್ನ ಪ್ರಾಣ ಹೋಗಿರುತ್ತದೆ. ಅಂದಾಗ ನಾನು ಏನು ಮಾಡಬಲ್ಲೆ?" ಇವನೇ ಸರಿಯಾದ ಅಂಗರಕ್ಷಕ ಎಂದು ಎರಡನೆಯವನನ್ನೇ ಆಯ್ಕೆ ಮಾಡಲಾಯಿತು. ಅಂದರೆ ಲೆಂಕನು ತನ್ನ ಒಡೆಯನ ರಕ್ಷಣೆಗೆ ಮೀಸಲಾದ ಕಾರಣ ತನ್ನ ಪ್ರಾಣದಾಸೆ ಅವನಿಗೆ ಇರಬಾರದು. ಅದೇ ರೀತಿ ಭಕ್ತನಿಗೆ ತನುಮನ ಧನದ ಆಸೆ ಇರಬಾರದು. ಇಂಥ ಪ್ರತಿಜ್ಞೆ ಕೈಗೊಂಡ ಭಕ್ತನಿಗೆ ಬರುವ ಪರೀಕ್ಷೆ ಹಲವಾರು. ಅವು ಎದುರಾದಾಗ ದೇವರ ಅನುಗ್ರಹದ ಬಗ್ಗೆ ಸಂದೇಹ ತಾಳಬಾರದು.

727. ವೀರಧೀರ ಸಮಗ್ರಾಹಕ

ನೀವಿರಿಸಿದ ಮನದಲ್ಲಿ ನಾನಂಜೆನಯ್ಯಾ?
ಮನವು ಮಹಾಘನಕ್ಕೆ ಶರಣುಗತಿವೊಕ್ಕುದಾಗಿ
ನೀವಿರಿಸಿದ ಧನದಲ್ಲಿ ನಾನಂಜೆನಯ್ಯಾ;
ಧನವು ಸತಿಸುತಮಾತಾಪಿತರಿಗೆ ಹೋಗದಾಗಿ
ನೀವಿರಿಸದ ತನುವಿನಲ್ಲಿ ನಾನಂಜೆನಯ್ಯಾ;
ತನುವು ಸರ್ವಾರ್ಪಿತದಲ್ಲಿ ನಿಯತ ಪ್ರಸಾದ ಭೋಗಿಯಾಗಿ
ಇದು ಕಾರಣ ವೀರಧೀರಸಮಗ್ರಾಹಕನಾಗಿ,
ನಿಮಗಾನಂಜೆ, ಲಿಂಗದೇವಾ! —ಬ.ವ.ದೀ. 726

ಎಲ್ಲಕ್ಕೂ ಅತೀತವಾದ ಒಂದು ಮನಃಸ್ಥಿತಿ ಅಳವಡುತ್ತದೆ. ಅಲ್ಲಿ ಭಯವಾಗಲಿ ಶಂಕೆಯಾಗಲಿ ಇರದ ಸ್ಥಿತಪ್ರಜ್ಞಸ್ಥಿತಿ. ಅದನ್ನು ಈ ವಚನದಲ್ಲಿ ಹೇಳಲಾಗಿದೆ.

"ದೇವಾ, ನನ್ನ ಮನಸ್ಸು ನಿನ್ನಲ್ಲಿ ಸಂಪೂರ್ಣ ಶರಣಾಗಿದೆ. ಹೀಗಾಗಿ ನೀವು ಕೊಡುವ ಯಾವುದೇ ಮನೋಭಾವಕ್ಕೆ ನಾನು ಅಂಜೆನು. ನೀವು ಎಷ್ಟಾದರೂ ಸಂಪತ್ತು ಎಲ್ಲವೂ ಸಮಾಜಕ್ಕಾಗಿ ಮೀಸಲು ಅದು ಹೆಂಡತಿ, ಮಕ್ಕಳು, ತಾಯಿ-ತಂದೆ, ಬಂಧು-ಬಳಗಕ್ಕೆ ಹೋಗದು. ನನ್ನ ಶರೀರವನ್ನು ನೀನು ಯಾವ ಸ್ಥಿತಿಯಲ್ಲಿ ಇಟ್ಟರೂ ನಾನು ಅಂಜೆನು, ಏಕೆಂದರೆ ನನ್ನ ತನುವು ನಿಯಮಿತವಾಗಿ ಪ್ರಸಾದ ಭೋಗಿಯಾಗಿದೆ. ಇದರಿಂದಾಗಿ ನಾನು ವೀರನು, ಧೀರನು ಮಾತ್ರವಲ್ಲ ಜೀವನನ್ನು ಸಮಚಿತ್ತದಿಂದ ಸ್ವೀಕರಿಸುವವನೂ ಆಗಿರುವ ಕಾರಣ ನಾನು ನಿಮಗೂ ಅಂಜುವುದಿಲ್ಲ."

728. ಶರಣನ ಫಲ

ಹಲ್ಲು ಹತ್ತಿ ನಾಲಗೆ ಹೊರಳದಿದ್ದಲ್ಲಿ
ಮನವೆರಡಾದಡೆ ಆಣೆ, ನಿಮ್ಮಾಣೆ!

ಮಾಡುವ ನೇಮಕ್ಕೆ ಛಲವಿಲ್ಲದಿದ್ದಡೆ ಆಣೆ ನಿಮ್ಮಾಣೆ!
ಲಿಂಗದೇವ, ಎನ್ನ ಮನವ ನೋಡಲೆಂದಟ್ಟಿದಡೆ
ಪ್ರಸಾದವಲ್ಲದೆ ಕೊಂಡನಾದಡೆ ಆಣೆ, ನಿಮ್ಮಾಣೆ. —ಬ.ವ.ದೀ 727

'ಅಕಸ್ಮಾತ್ ಹಲ್ಲು ಕಡಿದು ಆ ನೋವಿನಿಂದ ನಾಲಿಗೆ ಹೊರಳಬಹುದೇ ವಿನಾ ಎಂಥಾ ಪ್ರಸಂಗದಲ್ಲಿಯೂ ಅದು ಎರಡು ನುಡಿಯುವುದಿಲ್ಲ. ಹಿಡಿದ ಧ್ಯೇಯದಿಂದ ಮನವು ಎಂದೂ ಹಿಂದೆ ಸರಿಯುವುದಿಲ್ಲ. ಅದೇ ರೀತಿ ಮಾಡುವ ಧಾರ್ಮಿಕ ನಿಯಮಗಳನ್ನು ಛಲದಿಂದ ಮಾಡದಿದ್ದರೆ, ಆಣೆ, ನಿಮ್ಮಾಣೆ, ನನ್ನ ಛಲವನ್ನು ಪರೀಕ್ಷೆ ಮಾಡು ದೇವಾ, ಎಂಥಾ ಪ್ರಸಂಗ ದಲ್ಲಿಯೂ ಪ್ರಸಾದವನ್ನಲ್ಲದೆ ಅನ್ಯವನ್ನು ಕೊಳ್ಳುವುದಿಲ್ಲ". ಸುಪ್ರಭಾತದಲ್ಲಿ ಸ್ನಾನ ಪೂಜೆ ಮುಗಿಸಿ ಇಷ್ಟಲಿಂಗದ ನೆತ್ತಿಯ ಮೇಲೆ 3 ಬಾರಿ ನೀರನ್ನು ಎರೆದು ಗುರು-ಲಿಂಗ-ಜಂಗಮವನ್ನು ಸಂಬಂಧಿಸಿ ಕೊಂಡು ತೀರ್ಥವನ್ನಾಗಿ (ಪದೋದಕ) ಮಾಡಿ ಕರುಣ ಪ್ರಸಾದವನ್ನು ಸ್ವೀಕರಿಸಿ ನಂತರ ಕೊಂಡದ್ದು, ಉಂಡುದು ಪ್ರಸಾದ ಹಾಗಲ್ಲದೆ ಪೂಜೆ, ಕರುಣ ಪ್ರಸಾದವಿಲ್ಲದೆ ಸ್ವೀಕರಿಸಿದ್ದು ಅನರ್ಪಿತ, ಅಂಗಭೋಗ. ಆದ್ದರಿಂದ ಎಂಥಾ ಕಠಿಣತಮ ಪ್ರಸಂಗ-ರೋಗ ರುಜಿನ ಬಂದಾಗ, ಪ್ರವಾಸದಲ್ಲಿ ಸಹ ಸ್ನಾನಪೂಜೆ ಮಾಡುವುದು ನೇಮದಲ್ಲಿನ ಛಲ. ಅದನ್ನು ಗುರು ಬಸವಣ್ಣನವರು ಪಾಲಿಸುವುದಾಗಿ ಹೇಳಿದ್ದಾರೆ.

729. ಕುಲಶ್ರೇಷ್ಠತೆ ಯಾವುದರಲ್ಲಿದೆ?

ಹೊಕ್ಕಲ್ಲಿ ಹೊಕ್ಕು ನಿಮ್ಮೊಕ್ಕುದನುಂಬವನ
ದೇವಾ,ನೀನೊಲಿದವನ, ಸ್ವಾಮೀ
ನೀ ಹಿಡಿದವನ ಕುಲವೇನೋ?
ಕುಲಕ್ಕೆ ತಿಲಕ ನಮ್ಮ ಮಾದಾರ ಚನ್ನಯ್ಯ ನಿಮ್ಮಿಂದಧಿಕ!
ಲಿಂಗದೇವಾ. —ಬ.ವ.ದೀ 728

ಕಾಂಚೀಪುರದ ಚೋಳ ರಾಜ ಭಕ್ಷ್ಯಭೋಜ್ಯಗಳನ್ನು ಮಾಡಿಟ್ಟುಕೊಂಡು ಶಿವ(ಗುರು)ನಿಗಾಗಿ ಕಾಯುತ್ತಲಿದ್ದ ಆದರೆ ಆ ಶಿವ (ಗುರು)ನು ಮಾದಾರ ಚನ್ನಯ್ಯನ ಮನೆಯ ಅಂಬಲಿಯ ಉಂಡು ಹರ್ಷಿಸಿದ. ಮಾದಾರ ಚನ್ನಯ್ಯ ಅದೊಂದು ದಿನ ಊಟಕ್ಕೆ ಕುಳಿತಿದ್ದ. ಅಂದು ಅಂಬಲಿ ಅತಿ ರುಚಿ ಎನಿಸಿತು. ಇದು ಗುರುವಿಗೆ ಸಮರ್ಪಿತವಾದರೆ ಚೆಂದ ಎಂದುಕೊಂಡು, ಗುರುವಿಗೆ ಆಹ್ವಾನ ಕಳಿಸಿದ. ಆ ಗುರುವು ಮಹಾರಾಜನು ಭಕ್ಷ್ಯಭೋಜ್ಯಗಳೊಡನೆ ಕಾಯುತ್ತಿರುತ್ತಾನೆ. ಎಂದು ತಿಳಿದೂ ಸಹ ಬಡಭಕ್ತ ಚನ್ನಯ್ಯನ ಮನೆಯ ಅಂಬಲಿಯನ್ನು ಹೊಟ್ಟೆ ತುಂಬ ಉಂಡ. ಅಲ್ಲಿಂದ ಅರಮನೆಗೆ ಹೋದ. "ಚನ್ನಯ್ಯನ ಮನೆ ಅಂಬಲಿ ಉಂಡಾಯಿತು. ಇನ್ನು ಊಟ ಬೇಡ" ಎಂದಾಗ ರಾಜನಿಗೆ ಅಚ್ಚರಿ. ಯಾರು ಆ ಭಕ್ತ ? ರಾಜನ ಅರಮನೆಯ ಕುದುರೆಯ ಲಾಯಕ್ಕೆ ಹುಲ್ಲು ಹಾಕುವ, ಮಾದಾರ ಕುಲದಲ್ಲಿ ಹುಟ್ಟಿದ ಓರ್ವಭಕ್ತ. ರಾಜ ವಿಸ್ಮಿತನಾದ. ದುಷ್ಟರಾಜನಾಗಿದ್ದರೆ ಕೋಪಗೊಂಡು ಶಿಕ್ಷಿಸುತ್ತಿದ್ದ. ಸಜ್ಜನರಾಜನಾದುದರಿಂದ ಚನ್ನಯ್ಯನನ್ನು ಅರಮನೆಗೆ ಬರಮಾಡಿಕೊಂಡು ಗೌರವಿಸಿದ. ಇಲ್ಲಿ ಮೂವರೂ ಮಹಾನುಭಾವರೆ! ಅರಮನೆಯ ಆಹ್ವಾನಕ್ಕಿಂತ ಬಡ ಭಕ್ತನ ಪ್ರೀತಿಯ ಬಿನ್ನಹಕ್ಕೆ ಬೆಲೆಕೊಟ್ಟ ಗುರುವೂ ಘನ ಮಹಿಮನೆ.

ಭಕ್ತರ ಮನೆಯ ಹೊಕ್ಕು ಪ್ರಸಾದ ಸ್ವೀಕರಿಸುವ ಮಹಾತ್ಮ (ಗುರು)ನು ಉಂಡು ಕರುಣಿಸಿದ ಪ್ರಸಾದವನ್ನು ಉಂಡ ಧನ್ಯಾತ್ಮನ ಕುಲವನ್ನು ಕೇಳುವುದೆ? ದೇವಾ, ಎಲ್ಲಕ್ಕೂ

ಮಿಗಿಲು ನಿನ್ನ ಅನುಗ್ರಹ. ಅದನ್ನು ಪಡೆದವನ ಕುಲವನ್ನು ಕೇಳುವುದೆ? ಸ್ವಾಮಿ, ಭಕ್ತರು ದೇವನನ್ನು ಹಿಡಿದುಕೊಳ್ಳುವುದು ಸಹಜ. ಮಾದಾರ ಚನ್ನಯ್ಯನ ವಿಷಯದಲ್ಲಿ ನೀನೇ ಅವನನ್ನು ಹಿಡಿದುಕೊಂಡಿದ್ದೀಯೆ! ಅಂಥವನ ಕುಲವನ್ನು ಕೇಳುವುದೆ? ನಿಮ್ಮ ಮನವನ್ನೂ ಸೆಳೆದುಕೊಂಡ ಮಾದಾರ ಚೆನ್ನಯ್ಯ, ನಿಮಗಿಂತಲೂ ಅಧಿಕನೇ ಸರಿ!

730. ಇಷ್ಟಲಿಂಗಾರ್ಪಿತ.

ಅಂಗದ ಮೇಲಣ ಲಿಂಗ ಹಿಂಗಿರೆ
ಬಂದ ಸುಖವನಾರಿಗರ್ಪಿಸುವೆ?
ಹಿಂಗಲಾಗದು ಭಕ್ತಪಥಕ್ಕೆ ಸಲ್ಲದಾಗಿ!
ಹಿಂಗಲಾಗದು ಶರಣಪಥಕ್ಕೆ ಸಲ್ಲದಾಗಿ!
ಲಿಂಗದೇವರ ಹಿಂಗಿನುಂಗಿದುಗುಳು ಕಿಲ್ಬಿಷ! –ಬ.ವ.ದೀ 730

ಶರೀರದ ಮೇಲೆ ಇಷ್ಟಲಿಂಗವಿದ್ದರೆ ಉಣ್ಣುವ ಅನ್ನ, ಕುಡಿಯುವ ನೀರು ಎಲ್ಲವನ್ನೂ ಅದಕ್ಕೆ ತೋರಿ ಸ್ವೀಕರಿಸಬಹುದು. ಅದನ್ನೇ ಬಿಟ್ಟರೆ (ಹಿಂಗಿದರೆ) ನಾವೂ ಎಲ್ಲಿಗೆ ಅರ್ಪಿಸಬಹುದು? ಆದ್ದರಿಂದ ಭಕ್ತಿಪಥದಲ್ಲಿ, ಶರಣ ಪಥದಲ್ಲಿ ಇರುವವರು ಇಷ್ಟಲಿಂಗವನ್ನು ತೊರೆಯಬಾರದು. ಇಷ್ಟಲಿಂಗವಿಲ್ಲದೆ ನುಂಗುವ ಉಗುಳು ಸಹ ಹೊಲಸಿನಂತೆ !

731. ಶರಣ ಸತಿ–ಲಿಂಗಪತಿ

ಬತ್ತೀಸಾಯುಧದಲಿ ಅಭ್ಯಾಸವ ಮಾಡಿದಡೇನು?
ಹಗೆಯ ಕೊಲುವಡೆ ಒಂದಲಗು ಸಾಲದೆ?
ಲಿಂಗವ ಗೆಲುವಡೆ,
'ಶರಣಸತಿ ಲಿಂಗಪತಿ'ಯೆಂಬುದೊಂದಲಗು ಸಾಲದೆ?
ಎನಗೆಯೂ ನಿನಗೆಯೂ ಜಂಗಮಪ್ರಸಾದವೆಂಬ ಅಲಗು ಸಾಲದೆ?
ಲಿಂಗದೇವಾ. –ಬ.ವ.ದೀ 731

32 ಬಗೆಯ ಆಯುಧಗಳನ್ನು ಪ್ರಯೋಗಿಸಿ ಶಸ್ತ್ರಾಭ್ಯಾಸವನ್ನು ಮಾಡಿದರೇನಂತೆ ಶತ್ರುವನ್ನು ಕೊಲ್ಲಲಿಕ್ಕೆ ಒಂದು ಕತ್ತಿಯಾದರೆ ಸಾಲದೆ? ಹಾಗೇ ಲಿಂಗದೇವನನ್ನು ಒಲಿಸಲು ಹತ್ತಾರು ಮಾರ್ಗಗಳು ಇರಬಹುದಾದರೂ ಲಿಂಗವೇ ಪತಿ ಎಂದು ನಂಬಿ ಶರಣಸತಿ ಭಾವದಿಂದ ಶರಣಾಗುವುದು ಅತ್ಯಂತ ಸೂಕ್ತ ಹಾಗೂ ಶಕ್ತಿಶಾಲಿ ಮಾರ್ಗ. ಇದಕ್ಕೆ ಪೂರಕವಾಗಿರುವುದು ಜಂಗಮನ ಪ್ರಸಾದ ವಾಣಿ. ಶರಣರ ಸಂಗದಲ್ಲಿ ನಡೆಯುವ ಅನುಭವ ಗೋಷ್ಠಿಗಳು ಜಂಗಮ ಪ್ರಸಾದ, ಇವು ಶರಣಸತಿ ಭಾವವನ್ನು ಪಕ್ವಗೊಳಿಸಿ ದೇವನನ್ನು ಒಲಿಸುತ್ತವೆ.

732. ನೈತಿಕ ದೃಢತೆ

ಕೊಲ್ಲೆನಯ್ಯಾ ಪ್ರಾಣಿಗಳ, ಮೆಲ್ಲೆನಯ್ಯಾ ಬಾಯಿಚ್ಛೆಗೆ;
ಒಲ್ಲೆನಯ್ಯಾ ಪರಸತಿಯರ ಸಂಗವ;
ಬಲ್ಲೆನಯ್ಯಾ ಮುಂದೆ ತೊಡಕುಟೆಂಬುದು
ಬಳ್ಳದ ಬಾಯಂತೆ ಒಂದೆ ಮನವ ಮಾಡಿ
ನಿಲ್ಲೆಂದು ನಿಲ್ಲಿಸಯ್ಯಾ, ಲಿಂಗದೇವಾ. –ಬ.ವ.ದೀ 732

"ಪ್ರಾಣಿಗಳನ್ನು ಕೊಲ್ಲುವುದಿಲ್ಲ, ಜೀವ ಹಿಂಸೆ ಮಾಡುವುದಿಲ್ಲ. ನಾಲಿಗೆಯ ಇಚ್ಛೆಗಾಗಿ

ಮಾಂಸಾಹಾರವನ್ನು ಮಾಡುವುದಿಲ್ಲ. ಜೀವ ಹಿಂಸೆ ಮಾಡಿದರೆ ಇದಕ್ಕೆ ಪ್ರಚೋದನೆ ಕೊಡುವ ಮಾಂಸಾಹಾರ ತಿಂದರೆ ಅದರ ಫಲವಾಗಿ ಪಾಪ ಉಂಟಾಗುವುದೆಂಬುದನ್ನು ನಾನು ಬಲ್ಲೆನು. ಪರಸತಿಯರನ್ನು ಜಾಗ್ರತ್, ಸ್ವಪ್ನ, ಸುಷುಪ್ತಾವಸ್ಥೆಯಲ್ಲೂ ಬಯಸೆನು. ಪರಸತಿಯನ್ನು ಬಯಸಿದ ರಾವಣನ ಪಾಡು ಏನಾಯಿತು? ಅಳೆಯುವ ಬಳ್ಳಕ್ಕೆ ಹೇಗೆ ಒಂದೇ ಬಾಯಿಯಿದ್ದು ತಳವು ಮುಚ್ಚಲ್ಪಟ್ಟು ಭದ್ರವಾಗಿರುವುದೋ ಹಾಗೆ ನನ್ನ ಮನವೂ ನೈತಿಕ ದೃಢತೆಯಿಂದ ಇರುವಂತೆ ಮಾಡು, ಲಿಂಗದೇವ" ಎಂದು ದೇವರಲ್ಲಿ ಗುರು ಬಸವಣ್ಣನವರು ಬೇಡಿಕೊಳ್ಳುತ್ತಾರೆ.

733. ದೇವನಿಗೆ ಅಂಜಿ ರಾಜನ ಸೇವೆ.

ಆನೆ ಅಂಕುಶಕ್ಕಂಜುವುದೆ ಅಯ್ಯಾ
ಮಾಣದೆ ಸಿಂಹದ ನಖವೆಂದು ಅಂಜುವುದಲ್ಲದೆ?
ಆನೀ ಬಿಜ್ಜಳಂಗಂಜುವೆನೆ, ಅಯ್ಯಾ ಲಿಂಗದೇವಾ,
ನೀನು ಸರ್ವಜೀವದಯಾಪಾರಿಯಾದ ಕಾರಣ
ನಿನಗಂಜುವೆನಲ್ಲದೆ! –ಬ.ವ.ದೀ 733

ಈಗಾಗಲೇ ನಾನು ಬರೆದಿರುವಂತೆ ಬಿಜ್ಜಳನು ಅಕ್ರಮವಾಗಿ ಚಾಲುಕ್ಯ ತೈಲಪನನ್ನು ಗೃಹಬಂಧನದಲ್ಲಿರಿಸಿ ಸಿಂಹಾಸನವನ್ನು ಏರಿದ್ದನು. ಅಂದಿನ ಸಾಮಾಜಿಕ ಧಾರ್ಮಿಕ ನಿಯಮದ ಪ್ರಕಾರ ತೈಲಪನು ಚಕ್ರವರ್ತಿಯಾಗಬೇಕು. ಆದರವನು ಮದಿರೆ ಮತ್ತು ಮಾನಿನಿ ಪ್ರಿಯನಾದ ವಿಲಾಸಿಯಾಗಿ ರಾಜ್ಯಭಾರದಲ್ಲಿ ಆಸಕ್ತಿ ಕಳೆದುಕೊಂಡಿದ್ದನು. ಹೀಗಾಗಿ ಶೂರನೂ, ಪ್ರಜಾವತ್ಸಲನೂ ಆದ ಬಿಜ್ಜಳನಲ್ಲಿ ಗುರು ಬಸವಣ್ಣನವರು ಪ್ರಧಾನಿಯಾಗಿದ್ದರು. ಕೆಲವರು ಈ ಬಗ್ಗೆ ಟೀಕಿಸಿ, "ಬಿಜ್ಜಳನಿಗೆ ಹೆದರುತ್ತಾರೆ. ಅದಕ್ಕಾಗಿ ಅವನ ಅಕ್ರಮವನ್ನು ಪ್ರತಿಭಟಿಸುತ್ತಲಿಲ್ಲ" ಎನ್ನುತ್ತಿದ್ದರು. ಈ ಟೀಕೆಗೆ ಗುರು ಬಸವಣ್ಣನವರು ಈ ವಚನದಲ್ಲಿ ಉತ್ತರಿಸಿದ್ದಾರೆ.

"ಅಂಕುಶ ಒಂದು ಕಟ್ಟಿಗೆಯ ಸಣ್ಣ ತುಂಡು. ಇದಕ್ಕೆ ಆನೆ ಹೆದರುವುದಿಲ್ಲ. ಆ ಕಟ್ಟಿಗೆಯ ತುಂಡಿಗೆ ಸಿಂಹ (ಹುಲಿಯುಗುರು)ದ ಉಗುರನ್ನು ಸಿಕ್ಕಿಸಿರುತ್ತಾರೆ. ಆ ಉಗುರಿಗೆ ಸಿಂಹ ಹೆದರುವುದು. ಅದೇ ರೀತಿ ನಾನು ಬಿಜ್ಜಳನಿಗೆ ಹೆದರುವುದಿಲ್ಲ. ದೇವರು ಸರ್ವಜೀವದಯಾಪಾರಿಯಾದ ಕಾರಣ ಅವನಿಗೆ ಅಂಜುತ್ತೇನೆ. ಎಲ್ಲ ಜನರ ಹಿತ ಮುಖ್ಯ; ಯಾರು ಆಳುತ್ತಾರೆ ಎಂಬುದು ಮುಖ್ಯವಲ್ಲ. ತೈಲಪನನ್ನು ಸಮರ್ಥಿಸಲು ಆತ ಯೋಗ್ಯನಲ್ಲ. ಬಿಜ್ಜಳ ಎಲ್ಲಾ ದೃಷ್ಟಿಯಿಂದಲೂ ಸಮರ್ಥರಾಜ; ಜನರ ಹಿತದ ದೃಷ್ಟಿಯಿಂದ ನಾನು ಬಿಜ್ಜಳನ ಆಳ್ವಿಕೆಯನ್ನು ಇಷ್ಟಪಡುತ್ತೇನೆ"

734. ಶರಣ ಪ್ರೇಮಿ

ಬಂದಹರೆಂದು ಬಾರದೆ ಇದ್ದಡೆ, ಬಟ್ಟೆಗಳ ನೋಡುತ್ತಿದ್ದೆನಯ್ಯಾ
ಇನ್ನಾರನಟ್ಟುವೆ, ಇನ್ನಾರನಟ್ಟುವೆ, ಇನ್ನಾರ ಪಾದವ ಹಿಡಿವೆನಯ್ಯಾ?
ಲಿಂಗದೇವನ ಶರಣರು ಬಾರದಿದ್ದಡೆ
ಅಟ್ಟುವೆನೆನ್ನ ಪ್ರಾಣವನು! –ಬ.ವ.ದೀ 734

"ಶರಣರು ಬರುವರು ಎಂಬ ನಿರೀಕ್ಷೆಯಿಂದ ನಾನು ದಾರಿ ಕಾಯುತ್ತೇನೆ. ಅವರು ಬರದೆ ಇದ್ದರೆ ಮನಸ್ಸಿಗೆ ಬಹಳ ಬೇಸರ, ಶರಣರನ್ನು ಕರೆತರಲು ಯಾರನ್ನು ಕಳಿಸಲಿ? ಯಾರ ಪಾದವನ್ನು ಹಿಡಿದು ವಿನಂತಿಸಲಿ? ನನ್ನ ಪ್ರಾಣವನ್ನೇ ಶರಣರನ್ನು ಕರೆತರಲು ಅಟ್ಟುತ್ತೇನೆ." ಗುರು ಬಸವಣ್ಣನವರು ಶರಣರನ್ನು ಬಹುವಾಗಿ ಪ್ರೀತಿಸುತ್ತಿದ್ದರು, ಆದರಿಸುತ್ತಿದ್ದರು, ಗೌರವಿಸುತ್ತಿದ್ದರು, ಅವರ ಬರವಿಗಾಗಿ

ಹಂಬಲಿಸುತ್ತಿದ್ದರು. ಅವರ ಜೀವನದ ಒಂದು ಪ್ರಸಂಗ ಈ ವಚನಕ್ಕೆ ಉದಾಹರಣೆಯಾಗಿದೆ. ಒಮ್ಮೆ ಗುರು ಬಸವಣ್ಣನವರು ವಿಶ್ರಾಂತಿಯಲ್ಲಿರುತ್ತಾರೆ. ಆಗ ಒಬ್ಬ ಮುಗ್ಧ ಶರಣ ದರ್ಶನಕ್ಕೆ ಬರುತ್ತಾನೆ. ಬಾಗಿಲು ಕಾಯುವ ಸೇವಕನು ಅಪ್ಪನವರು ವಿಶ್ರಾಂತಿಯಲ್ಲಿದ್ದಾರೆಂದು ವಾಪಸ್ಸು ಕಳಿಸುತ್ತಾನೆ. ಗುರು ಬಸವಣ್ಣನವರು ಎಷ್ಟು ಹೊತ್ತಾದರೂ ಏಳಲಿಲ್ಲವೆಂದು ತಾಯಿ ನೀಲಾಂಬಿಕೆಯವರು ಎಚ್ಚರಿಸಲು ಬಂದಾಗ ಪ್ರಾಣವು ಇಲ್ಲದಿರುವುದನ್ನು ಗಮನಿಸುವರು. ಎಲ್ಲರೂ ಗಾಬರಿಗೊಂಡಿರುವಾಗ ಚನ್ನಬಸವಣ್ಣನವರು ವಿಚಾರಿಸುವರು, "ಯಾರಾದರೂ ಶರಣರು ದರ್ಶನಕ್ಕೆ ಬಂದು ವಾಪಸ್ಸು ಹೋಗಿರುವರೆ?" ಎಂದು. ನಿಜ ಸಂಗತಿ ತಿಳಿದಾಗ ಆ ಶರಣನನ್ನು ಹುಡುಕಿ, ಗುರುತಿಸಿ ವಾಪಸ್ಸು ಕರೆತರುತ್ತಾರೆ. ಆತ ಬಂದು ಗುರುಬಸವಣ್ಣನವರ ಹತ್ತಿರ ನಿಂತಾಗ "ಅವರ ಪ್ರಾಣ ಮರಳಿ ಬಂದು ಸೇರಿಕೊಂಡು" ಎಚ್ಚರಗೊಳ್ಳುತ್ತಾರೆ. ಹೀಗೆ ಜಂಗಮ ಪ್ರಾಣಿಯಾದ ಗುರು ಬಸವಣ್ಣನವರು ಶರಣರನ್ನು ಆಹ್ವಾನಿಸಲು, ಬರಮಾಡಿಕೊಳ್ಳಲು ತಮ್ಮ ಪ್ರಾಣವನ್ನು ಕಳಿಸುತ್ತಿದ್ದರು ಎಂಬುದಕ್ಕೆ ಮೇಲ್ಕಂಡ ವಚನ ವಾಕ್ಯ ಪುಷ್ಟಿ ನೀಡುತ್ತದೆ.

735. ಶರಣ ಸತಿಯ ವಿಶ್ವಾಸ

ಅರಸರು ಮಂಚಕ್ಕೆ ಬರಿಸಿ ಎನ್ನ ಬೆರಸಿದ ಬಳಿಕ
ಆನಂಜುವಳೆ? ಆನು ಸಿರಿಯಕ್ಕನೇ;
ಪರುಷ ಮುಟ್ಟಿದ ಬಳಿಕ ಲೋಹವೇ?
ಲಿಂಗದೇವ, ಎನ್ನನೊಲ್ಲದಡಾನು ಬದುಕುವನೆ? –ಬ.ವ.ದೀ 735

ಅರಸ ಎಂದರೆ ಇಲ್ಲಿ ಲಿಂಗದೇವ, ಮಂಚ ಎಂದರೆ ಹೃದಯ, ಬೆರೆಸುವುದು ಎಂದರೆ ಲಿಂಗಾಂಗ ಸಾಮರಸ್ಯದ ಅನುಭವ ಪಡೆಯುವುದು. ಲಿಂಗಪತಿಯು ಸಾಮರಸ್ಯದ ಅನುಭವ ಕರುಣಿಸಿದ ಬಳಿಕ ನನಗೆ ಇನ್ನಾವ ಅಂಜಿಕೆಯಿಲ್ಲ; ಹೆದರಲು ನಾನೇನು ಸಿರಿಯಕ್ಕನೆ(?)? ಪರುಷ ಮುಟ್ಟಿದ ಬಳಿಕ ಲೋಹ (ಕಬ್ಬಿಣ)ವು ತನ್ನ ಗುಣವನ್ನು ಕಳೆದುಕೊಂಡು ಹೊನ್ನಾಗುವಂತೆ ನನ್ನ ಮನಸ್ಸು ಮುನ್ನಿನ ಅಂಜಿಕೆ, ಸಂಶಯ, ಆತಂಕಗಳನ್ನು ಕಳೆದುಕೊಂಡು ನಿಶ್ಚಿಂತವಾಗಿದೆ ಲಿಂಗದೇವನು ನನ್ನನ್ನು ಒಲ್ಲದಿದ್ದರೆ ನಾನು ಬದುಕಲು ಸಾಧ್ಯವಿಲ್ಲ

736. ಶಿವನ ವಿಚಿತ್ರ ಲೀಲೆ

ಎಲ್ಲಿ ಹೊಕ್ಕಲ್ಲಿ ನಿನ್ನ ವಿಕಾರವ ಮಾಣೆ; ಗರುವತನವೆ!
ದಾಸನ ವಸ್ತ್ರವನುಡುವುದೊಂದು ಗರುವತನವೆ!
ಸಿರಿಯಾಳನ ಮಗನ ಬೇಡುವುದೊಂದು ಗರುವತನವೆ!
ಬಲ್ಲಾಳನ ವಧುವ ಬೇಡುವುದೊಂದು ಗರುವತನವೆ!
ಕೋಡಗವ ಹುಲ್ಲಲಿ ಮುಸುಂಕಿದಂತೆ
ಕೂಡಲಸಂಗಮದೇವಾ, ನಿನ್ನ ಪರಿ! –ಬ.ವ.ದೀ 736

ಎಲ್ಲಿ ಹೋದಲ್ಲಿ ವಿಲಕ್ಷಣ ವರ್ತನೆ ಮಾಡಿ ಬರುತ್ತೀಯೆ! ಇದೇನು ನಿನಗೆ ಹಿರಿಮೆಯ ಸಂಗತಿಯೇ?! ದೇವರ ದಾಸಿಮಯ್ಯನಿಂದ ವಸ್ತ್ರವನ್ನು ಪಡೆದು, ಛಿದ್ರ ಛಿದ್ರ ಮಾಡಿದೆ, ಆ ಮೇಲೆ ಸ್ವಲ್ಪ ಹೊತ್ತಿನಲ್ಲಿಯೇ ಅಕ್ಷಯ ಸಂಪತ್ತನ್ನು ಕರುಣಿಸಿದೆ, ಸಿರಿಯಾಳನ ಮಗನ ಮಾಂಸವನ್ನೇ ಬೇಡಿದೆ. ಸಿಂಧು ಬಲ್ಲಾಳನ ಹೆಂಡತಿಯನ್ನು ಬೇಡಿದೆ. ಇವೆಲ್ಲ ಲೋಕವಿರೋಧಿಯಾದ ವಿಲಕ್ಷಣ ವರ್ತನೆಗಳು, ಕೋತಿಯನ್ನು ಹುಲ್ಲಿನಲ್ಲಿ ಮುಚ್ಚಿಟ್ಟರೆ ಅದು ಎಷ್ಟು ಹೊತ್ತು ಇರುವುದು?

ಕೊಡವಿಕೊಂಡು ಹೊರಬರುವುದು. ಹಾಗೆ ನೀನು ಸ್ವಲ್ಪ ಹೊತ್ತಿನಲ್ಲೇ ನಿನ್ನ ನಿಜವಾದ (ಶಿವನ) ರೂಪವನ್ನು ತೋರಿಸಿ ಬಿಡುತ್ತೀಯೆ!

737. ಪಕ್ಷಪಾತ?

ಸಿರಿಯಾಳನ ಮಗನ ಬಾಣಸವ ಮಾಡಿಸಿ ಉಣಲೊಲ್ಲದೆ ಕಾಡಿದೆ,
ಚೋಳನ ಮನೆಯಲ್ಲುಣಲೊಲ್ಲದೆ ಚನ್ನನ ಮನೆಯಲುಂಡೆ;
ಒಬ್ಬರಿಗೊಂದು ಪರಿಯ ಮಾಡಿದೆ, ಕೂಡಲಸಂಗಮದೇವ! –ಬ.ವ.ದೀ 737

ಬಾಲಕನ ನರಮಾಂಸ ಬೇಕು ಎಂಬ ಅಪೇಕ್ಷೆ ಮುಂದಿಟ್ಟೆ, ಸಿರಿಯಾಳ ಚಂಗಳೆಯರು ತಮ್ಮ ಪ್ರೀತಿಪಾತ್ರ ಮಗನನ್ನೇ ಕಡಿದಿಟ್ಟರು. ಅಡಿಗೆ ಎಲ್ಲ ಆಗಿ ಊಟಕ್ಕಿಟ್ಟಾಗ "ನಿಮ್ಮ ಮಗನನ್ನು ಕರೆಯಿರಿ; ಮಕ್ಕಳಿಲ್ಲದ ಮನೆಯಲ್ಲಿ ನಾವು ಉಣ್ಣುವುದಿಲ್ಲ" ಎಂದು ಆಕ್ಷೇಪ ತೆಗೆದೆ. ಹೀಗೆ ಭಕ್ತರನ್ನು ಕಾಡುವುದು ನಿನ್ನ ಚಾಳಿ. ರಾಜಾಧಿರಾಜ ಚೋಳನ ಮನೆಯ ಭಕ್ಷ್ಯ ಭೋಜ್ಯಗಳನ್ನು ತಿರಸ್ಕರಿಸಿ ಮಾದಾರ ಚನ್ನಯ್ಯನ ಮನೆಯಲ್ಲಿ ಅಂಬಲಿಯನುಂಡೆ. ಒಬ್ಬರಿಗೊಂದೊಂದು ಪರಿಯಲ್ಲಿ ಪಕ್ಷಪಾತ ತೋರುವವ ನೀನು!

738. ಭಿಕ್ಷುಕ

ಒಬ್ಬನ ಮನೆಯಲುಂಡು ಹೊತ್ತುಗಳೆದೆ
ಒಬ್ಬನ ಮನೆಯಲುಡಲೊಂದು ಗಳಿಸಿದೆ;
ಗರ್ವ ಬೇಡ, ಬೇಡ ನಿನಗೆ!
ಚನ್ನಯ್ಯನ ಮನೆಯಲಂಬಲಿಯನುಂಡು ಬದುಕಿದೆ,
ಗರ್ವ ಬೇಡ, ಬೇಡ!
ಕೂಡಲ ಸಂಗಯ್ಯಾ, ಸಿರಿಯಾಳನಿಂದ ಮಾನಿಸಲೋಕಗಂಡೆ! –ಬ.ವ.ದೀ 738

ಸಿರಿಯಾಳನ ಮನೆಯಲ್ಲಿ ಭೋಜನ ಸವಿವ ಕೆಲಸ ಮಾಡಿದೆ, ದೇವರ ದಾಸಿಮಯ್ಯನಿಂದ ಉಡಲು ವಸ್ತ್ರವ ಪಡೆದೆ, ನಿನಗೆ ಗರ್ವಬೇಡ, ನೀನು ಭಿಕ್ಷೆ ಬೇಡುವವನು, ಚನ್ನಯ್ಯನ ಮನೆಯಲ್ಲಿ ಅಂಬಲಿಯನುಂಡೆ. ಎಲೆ ಶಿವನೇ ಸಿರಿಯಾಳನಿಂದಾಗಿ ನೀನು ಮನುಷ್ಯ ಲೋಕಕ್ಕೆ ಬಂದು ಭಕ್ತ ಪರೀಕ್ಷಕನಾದೆ!

739. ಭಕ್ತರ ದಾಸ

ಹರಿಯಜ ಮುನಿಗಳೆಲ್ಲರು, ನಿಜ, ನಿಮ್ಮ ಬಾಗಿಲ ಕಾಯ್ದಿಹರು;
ಏನು ಕಾರಣ ನೀವು ಬಾಣನ ಬಾಗಿಲ ಕಾಯ್ದಿರಿ?
ಡಿಂಗರಿಗನ ಮನೆಗೆ ಅಂಗಜಾಹವಕ್ಕೆ ಹೋಗಿದ್ದವರೊಳರೆ
ಕೂಡಲಸಂಗಮದೇವಾ? –ಬ.ವ.ದೀ 739

ಎಲೆ ಶಿವನೇ, ಹರಿ ಬ್ರಹ್ಮ ಋಷಿ ಮುನಿಗಳೆಲ್ಲರು ನಿಮ್ಮ ಬಾಗಲು ಕಾಯುತ್ತಾರೆ. ಆದರೆ ನೀವು ನಿಮ್ಮ ಪರಮಭಕ್ತನಾದ ಬಾಣಾಸುರನ ಬಾಗಿಲನ್ನು ಕಾಯ್ದಿರಿ. ನಿಮ್ಮ ಡಿಂಗರಿಗನಾದ ಸೇವಕ ಸೌಂದರ ನಂಬಿಯು ತನ್ನ ಪ್ರೇಯಸಿಯನ್ನು ಪಡೆಯುವ ಕಾಮಯುದ್ಧ (ಅಂಗಜಾಹವ)ದಲ್ಲಿ ಕುಂಟಣಿ (ಮಧ್ಯವರ್ತಿ)ಯಾಗಿ ಕೆಲಸ ಮಾಡಿದಿರಿ, ಏನು ನಿಮ್ಮ ವಿಚಿತ್ರ ಲೀಲೆ!

740. ಚುಳುಕಾದ ದೇವ

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮುಕುಟ!
ಅಪ್ರಮಾಣ ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ,
ಲಿಂಗದೇವಯ್ಯಾ, ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ!–ಬ.ವ.ದೀ 740

ಎಲೆ ಲಿಂಗದೇವನೆ, ನೀನು ಜಗತ್ತನ್ನೆಲ್ಲ ವ್ಯಾಪಿಸಿಕೊಂಡಿದ್ದೀಯ, ಆಕಾಶವನ್ನು ವ್ಯಾಪಿಸಿ ಕೊಂಡಿದ್ದೀಯಿ ಇನ್ನೂ ಹಿರಿದಾಗಿದ್ದೀಯೆ; ಎಷ್ಟು ವಿಸ್ತಾರವಾಗಿದ್ದೀಯ ಎಂದರೆ ನಿನ್ನಷ್ಟೆ! ಏಕೆಂದರೆ ನಿನಗೆ ಹೋಲಿಕೆ ಕೊಡಲು ಬೇರೇನೂ ಇಲ್ಲ; ಅತ್ಯಂತ ಕೆಳಗಿನ ಲೋಕವಾದ ಪಾತಾಳವನ್ನು ಮೀರಿವೆ ನಿನ್ನ ಪಾದಗಳು, ಬ್ರಹ್ಮಾಂಡದ ತುದಿಯನ್ನು ದಾಟಿದೆ ನಿನ್ನ ದಿವ್ಯ ಶಿರಸ್ಸು. ನೀನು ಅಪ್ರಮಾಣನು, ಅಗಮ್ಯನು, ಅಗೋಚರನು, ಅಪ್ರಮಾಣನು ಇಂಥ ನೀನು ನನ್ನ ಕೈಗೆ ಚುಳುಕಾಗಿ ಬಂದಿದ್ದೀಯೆ! ವಿಶ್ವದಾಕಾರದಲ್ಲಿ ಸೃಷ್ಟಿಕರ್ತನು ಚುಳುಕಾಗಿ ಇಷ್ಟಲಿಂಗವಾಗಿರುವ ಬಗ್ಗೆ ಗುರು ಬಸವಣ್ಣನವರು ಈ ರೀತಿ ಉದ್ಗರಿಸುತ್ತಾರೆ.

741. ಶರಣರ ಗೋತ್ರವಾವುದು?

ಗೋತ್ರ ನಾಮವ ಬೆಸಗೊಂಡರೆ
ಮಾತನೂಕದೆ ಸುಮ್ಮನಿದ್ದಿರಿದೇನಯ್ಯಾ?
ತಲೆಯ ಕುತ್ತಿ ನೆಲನ ಬರೆಯುತ್ತಿದ್ದಿರಿದೇನಯ್ಯಾ?
ಗೋತ್ರ ಮಾದಾರ ಚನ್ನಯ್ಯ, ಡೋಹಾರ ಕಕ್ಕಯ್ಯನೆಂಬುದೇನು,
ಲಿಂಗದೇವಾ? –ಬ.ವ.ದೀ 741

ಗುರು ಬಸವಣ್ಣನವರು ಇಷ್ಟಲಿಂಗವನ್ನು ಕೇಂದ್ರವಾಗಿಟ್ಟುಕೊಂಡು ಲಿಂಗಾಯತ ಧರ್ಮವನ್ನು ಸ್ಥಾಪಿಸಿ ಎಲ್ಲರಿಗೂ ಧರ್ಮಮಂದಿರದ ಹೆಬ್ಬಾಗಿಲನ್ನು ತೆರೆದರು. ಆಗ ಎಲ್ಲ ಜಾತಿ ಮತ ಪಂಥ ಧರ್ಮಗಳವರೂ ದೀಕ್ಷೆ ಪಡೆದು ಧರ್ಮದೊಳಕ್ಕೆ ಪ್ರವೇಶಿಸಿದರು. ಮೇಲ್ಜಾತಿಗಳಿಂದ ಬಂದ (ದ್ವಿಜ ವರ್ಣಗಳ)ವರು ತಾವು ಶ್ರೇಷ್ಠ ಗೋತ್ರಗಳಿಂದ ಬಂದವರು ಎಂಬ ಹೆಮ್ಮೆಯಿಂದ ಕೆಳಜಾತಿಗಳಿಂದ ಬಂದವರನ್ನು "ನೀವು ಯಾವ ಗೋತ್ರಗಳಿಂದ ಬಂದಿದ್ದೀರಿ? ಎಂದು ಮೂದಲಿಸುತ್ತಿದ್ದರು. ಈ ಘಟನೆ ಗುರು ಬಸವಣ್ಣನವರಿಗೆ ತುಂಬಾ ಅಸಹನೆ ಮತ್ತು ನೋವನ್ನು ತರುತ್ತಿತ್ತು. ಅವರು ನಿಮ್ನ ವರ್ಗದಿಂದ ಬಂದವರಿಗೆ ಆತ್ಮ ವಿಶ್ವಾಸ ತುಂಬಲು ಈ ವಚನವನ್ನು ಲಿಖಿಸಿದ್ದಾರೆ. "ನಿಮ್ಮ ಗೋತ್ರವಾವುದು ಎಂದು ಯಾರಾದರೂ ಕೇಳಿದರೆ ನೀವು ಸಂಕೋಚಗೊಂಡು ಮಾತನಾಡದೆ ಸುಮ್ಮನಿರುವಿರೇಕೆ? ತಲೆ ತಗ್ಗಿಸಿಕೊಂಡು ಕಾಲಿನ ಹೆಬ್ಬೆರಳಿನಿಂದ ನೆಲದ ಮೇಲೆ ಬರೆಯುವಿರೇಕೆ? ನೀವು ಬಹಳ ಶ್ರೇಷ್ಠ ಪುರುಷರನ್ನು ಹೊಂದಿದ ಪರಂಪರೆಯುಳ್ಳವರು. ಶಿವನಿಗೇ ಅಂಬಲಿ ಉಣ್ಣಿಸಿದ ಮಾದಾರ ಚನ್ನಯ್ಯ, ಮಹಾ ಪ್ರಸಾದಿ ದೋಹರ ಕಕ್ಕಯ್ಯ ನಿಮ್ಮ ಗೋತ್ರ ಪುರುಷರು ಎಂದು ಹೆಮ್ಮೆಯಿಂದ ತಲೆ ಎತ್ತಿ ಹೇಳಿರಿ" ಎಂದು ನುಡಿಯುತ್ತಾರೆ.

742. ಏಕಲಿಂಗ ನಿಷ್ಠೆ

ನಿಷ್ಠೆಯಿಂದ ಲಿಂಗವ ಪೂಜಿಸಿ
ಮತ್ತೊಂದು ಪಥವನರಿಯದ ಶರಣರು
ಸರ್ಪನ ಹೆಡೆಯ ಮಾಣಿಕದಂತಿಪ್ಪರು ಭೂಷಣರಾಗಿ!

ದರ್ಪಣದೊಳಗಣ ಪ್ರತಿಬಿಂಬದಂತೆ ಹಿಂಗದಿಪ್ಪರು,
ಲಿಂಗದೇವಾ ನಿಮ್ಮ ಶರಣರು. –ಬ.ವ.ದೀ 742

ಏಕದೇವ ನಿಷ್ಠೆಯಿಂದ ಇಷ್ಟಲಿಂಗವ ಪೂಜಿಸಿ ಮತ್ತೊಂದು ದಾರಿಗೆ ಹೋಗದವರು ನಿಜ ಶರಣರು. 12 ವರ್ಷ ಕಾಲ ಯಾರನ್ನೂ ಕಡಿಯದೆ ಇದ್ದರೆ ಅಂತಹ ನಾಗರಹಾವಿನ ವಿಷದಲ್ಲಿ ಒಂದು ರತ್ನವು ಉತ್ಪತ್ತಿಯಾಗುವುದಂತೆ. ಈ ನಾಗಮಣಿ ಬಹಳ ಅಮೂಲ್ಯವಂತೆ. ಅದೇ ರೀತಿ ಏಕಲಿಂಗ ನಿಷ್ಠಾಪರನಾದ ಶರಣನು ಸಹ ಅಪೂರ್ವಸಾಧಕನು. ಕನ್ನಡಿಯೊಳಗಣ ಪ್ರತಿಬಿಂಬದಂತೆ ಶೋಭಿಸುವರು.

743. ಏಕದೈವ ನಿಷ್ಠೆ

ಶಿವಲೋಕಕ್ಕೆ ಸರಿ ಬೇರೆ ಲೋಕವಿಲ್ಲ;
ಶಿವಮಂತ್ರಕ್ಕೆ ಸರಿ ಬೇರೆ ಮಂತ್ರವಿಲ್ಲ
ಜಗಕ್ಕೆ ಇಕ್ಕಿದೆ ಮುಂಡಿಗೆಯನೆತ್ತಿಕೊಳ್ಳಿ;
'ಕೂಡಲ ಸಂಗಮದೇವನೊಬ್ಬನೇ ದೈವ' ವೆಂದು –ಬ.ವ.ದೀ 743

ಗುರು ಬಸವಣ್ಣನವರ (ಮತ್ತು ಅವರ ಸಮಕಾಲೀನರ) ವಚನಗಳನ್ನು ಪುಟ್ಟಿಯೊಳಕ್ಕೆ ತುಂಬಿದಂತೆ ಪ್ರಕಟಿಸಿರುವುದರಿಂದ ಸಾಹಿತಿಗಳಲ್ಲಿ, ಓದುಗರಲ್ಲಿ ಗೊಂದಲವೇ ತುಂಬಿದೆ. ಶರಣರ ಮನಸ್ಥಿತಿ, ಮಾನಸಿಕ ಬೌದ್ಧಿಕ ವಿಕಾಸಕ್ಕೆ ಅನುಗುಣವಾಗಿ ವರ್ಗೀಕರಿಸುತ್ತಿದ್ದರೆ ನಮಗೆ ಸಿಗುವ ಚಿತ್ರಣವೇ ಬೇರೆ ಆಗುತ್ತಿತ್ತು.

ಈ ಮೇಲಿನ ವಚನದಲ್ಲಿ ಶಿವ ನಿಷ್ಠೆಯನ್ನು, ಏಕದೈವ ನಿಷ್ಠೆಯನ್ನು ಕಾಣುತ್ತೇವೆ. ಏಕದೇವ (Monotheism) ಮತ್ತು ಏಕದೈವ (Monodeitism) ಈ ಎರಡಕ್ಕೂ ಬಹಳ ಅಂತರವಿದೆ. ಉಪಾಸನೆಯ್ಲುಲಿ ೩ ವಿಧ ಬಹುದೇವತೋಪಾಸನೆ, ಏಕದೇವತಾ ಉಪಾಸನೆ ಮತ್ತು ಏಕದೇವೋಪಾಸನೆ ಎಂದು. ಬಹುದೇವತೋಪಾಸನೆ (Polytheism) ಯಲ್ಲಿ ಹಲವು ದೇವತೆಗಳ ಅಸ್ತಿತ್ವದಲ್ಲಿ ನಂಬಿಕೆ ಇರುತ್ತದೆ; ಹಲವು ದೇವತೆಗಳ ಆರಾಧನೆ ಇರುತ್ತದೆ ಏಕದೇವತಾ ಉಪಾಸನೆಯಲ್ಲಿ ತಾನು ನಂಬಿದ ದೈವವೇ ಸರ್ವಶ್ರೇಷ್ಠ ಎಂಬ ಭಾವವಿರುತ್ತದೆ. ಏಕದೇವೋಪಾಸನೆಯಲ್ಲಿ ಸೃಷ್ಟಿಕರ್ತನ ಬಗ್ಗೆ ಅಖಂಡ ವಿಶ್ವಾಸವಿದ್ದು, ಕರ್ತನನ್ನಲ್ಲದೆ ಅನ್ಯ ದೈವ (ದೇವತೆ)ಗಳನ್ನು ಆರಾಧಿಸುವುದಿಲ್ಲ ಎಂಬ ನಿಷ್ಠೆ ಇರುತ್ತದೆ, ಬ್ರಾಹ್ಮಣ ಮೂಲಕ ಗುರು ಬಸವಣ್ಣನವರು ಬಾಲ್ಯದಲ್ಲಿ ಬಹುದೇವತೋಪಾಸಕರಾಗಿದ್ದಿರಬಹುದು, ಮನೆಯ ಸಂಪ್ರದಾಯಕ್ಕೆ ಅನುಗುಣವಾಗಿ. ವೈದಿಕ ಧರ್ಮವನ್ನು ಅವರು ತೊರೆಯಲು ಇರುವ ಕಾರಣಗಳಲ್ಲಿ ಬಹು ದೇವತೋಪಾಸನೆಯೂ ಒಂದು. ಮನೆಯನ್ನು ತ್ಯಜಿಸಿ ಕೂಡಲ ಸಂಗಮಕ್ಕೆ ಬಂದು ಸಂಗಮೇಶ್ವರನ ಪೂಜಾರಿಯಾಗಿದ್ದಾಗ ಅವರು ಏಕದೇವತಾ ಶಿವೋಪಾಸಕರಾದರು. ನಂತರ ಸಾಕ್ಷಾತ್ಕಾರ ಹೊಂದಿ ಸೃಷ್ಟಿಕರ್ತನ ಹಿರಿಮೆಯನ್ನು ಗುರುತಿಸಿ ಅವನನ್ನು ವಿಶ್ವದಾಕಾರದಲ್ಲಿ ಇಷ್ಟಲಿಂಗವಾಗಿ ಸಾಕಾರಗೊಳಿಸಿದರು. ನಿರಾಕಾರ ದೇವನನ್ನು ಲಿಂಗದೇವನೆಂದು ಕರೆದು ಅವನ ಸಾಕಾರ ಕುರುಹು ಇಷ್ಟಲಿಂಗವನ್ನು ಎಲ್ಲರಿಗೂ ಜಾತಿ, ವರ್ಣವರ್ಗಲಿಂಗ ಭೇದವಿಲ್ಲದೆ ಕೊಡುವ ವ್ಯವಸ್ಥೆ ಮಾಡಿದರು.

ಈ ಹಿನ್ನೆಲೆಯಲ್ಲಿ ಗುರು ಬಸವಣ್ಣನವರ ವಚನಗಳನ್ನು ವರ್ಗೀಕರಿಸಿ, ಅರ್ಥ ಮಾಡಿಕೊಳ್ಳಬೇಕು. ಮೇಲಿನ ವಚನ ಅವರು ಏಕದೇವತಾ–ಶಿವೋಪಾಸಕರಾಗಿದ್ದಾಗ ಬರೆದ ವಚನ. "ಶಿವಲೋಕಕ್ಕೆ ಸಮನಾದ ಲೋಕ ಮತ್ತೊಂದಿಲ್ಲ, ಶಿವ ಮಂತ್ರಕ್ಕೆ ಸಮನಾಗಿ ಬೇರೆ ಮಂತ್ರವಿಲ್ಲ" ಜಗತ್ತಿಗೆ ಒಂದು ಸವಾಲು ಎಸೆಯುತ್ತಾರೆ "ಶಿವ (ಕೂಡಲ ಸಂಗಮದೇವ) ನೊಬ್ಬನೇ ದೈವವೆಂದು".

ನಂತರ ಅವರು ಪ್ರತಿಪಾದಿಸಿದ ಸಿದ್ಧಾಂತದಲ್ಲಿ," ಮರ್ತ್ಯಲೋಕ ಬಿಟ್ಟು ಬೇರೆ ಲೋಕವಿಲ್ಲ. ಈ ಲೋಕದೊಳಗೇ ಮತ್ತೆ ಅನಂತ ಲೋಕ. ಇಬ್ಬರು ಮೂವರು ದೇವರೆಂದು ಉಬ್ಬುಬ್ಬಿ ಮಾತನಾಡ ಬಾರದು. ದೇವನೊಬ್ಬನೆ." ಗುರು ಬಸವಣ್ಣವರ ಮಾನಸಿಕ ಸ್ಥಿತ್ಯಂತರವನ್ನು ಅರಿಯದಿದ್ದರೆ ವಚನಗಳನ್ನು ತಪ್ಪಾಗಿ ಅರ್ಥಮಾಡುವ ಸಂಭವವಿದೆ. ಮೇಲಿನ ವಚನ ಮಧ್ಯಂತರದ ನಂಬಿಕೆ ಯನ್ನು ಬಿಂಬಿಸುತ್ತದೆಯೇ ವಿನಾ ಅಂತಿಮವಾದ ಅವರ ಸೈದ್ಧಾಂತಿಕ ವಿಚಾರಧಾರೆಯನ್ನಲ್ಲ.

744. ಏಕದೇವ ವಿಶ್ವಾಸದ ಕನ್ನಡಿ

'ಈಶ್ವರ ಸದ್ಭಾವೇ ಕಿಂ ಪ್ರಮಾಣಂ'?
ಎಂಬ ಮೀಮಾಂಸಕನ ಮೂಗಿನ ಕೊನೆಯನು
ವಿಶ್ವತಃಶ್ಚಕ್ಷುರುತ ವಿಶ್ವತೋ ಮುಖೋ
ವಿಶ್ವತೋ ಬಾಹುರುತ ವಿಶ್ವತಃ ಪಾತ್
ಸಂ ಬಾಹುಭ್ಯಾಂ ಧಮತಿ ಸಂ ಪತತ್ರೈಃ
ದ್ಯಾವಾಭೂಮೀ ಜನಯನ್ ದೇವ ಏಕಃ
ಎಂಬ ಸುರಗಿಯಲಿರಿದು, ವೈಶೇಷಿಕ ಎಂಬ ಇಟ್ಟಿಗೆಯಲೊರಸಿ
ಲಿಂಗದೇವಯ್ಯನೆ ಕನ್ನಡಿಯ ತೋರುವನು. –ಬ.ವ.ದೀ 744

ಸೃಷ್ಟಿಕರ್ತ (ಈಶ್ವರ) ಇರುವುದಕ್ಕೆ ಏನು ಪ್ರಮಾಣ?.ಎಂದು 'ಕರ್ಮ'ಕ್ಕೆ ಪ್ರಾಧಾನ್ಯತೆ ಕೊಡುವ ಮೀಮಾಂಸಕರು ಹೇಳುವರು, ಇದಕ್ಕೆ ಗುರು ಬಸವಣ್ಣನವರು ಉತ್ತರವನ್ನು ಕೊಡುವರು ವೇದ, ಉಪನಿಷತ್ತುಗಳು ಹೇಳುತ್ತವೆ, ವಿಶ್ವದಲ್ಲೆಲ್ಲ ದೇವನ ಕಣ್ಣುಗಳು ಹರಡಿವೆ (ಸರ್ವದ್ರಷ್ಟಾರ) ವಿಶ್ವದಲ್ಲೆಲ್ಲ ಅವನ ಮುಖವಿದೆ, ವಿಶ್ವದಲ್ಲೆಲ್ಲ ಅವನ ಬಾಹುಗಳಿವೆ, (ಸರ್ವಶಕ್ತ) ವಿಶ್ವದಲ್ಲೆಲ್ಲ ದೇವನ ಪಾದಗಳಿವೆ (ಸರ್ವವ್ಯಾಪಿ) ಭೂಮಿ, ಆಕಾಶ ಎಲ್ಲೆಡೆಯಲ್ಲಿ ಇರುವ ದೇವನೊಬ್ಬನೆ! ದ್ರಷ್ಟಾರರ ಈ ಮಾತುಗಳೆಂಬ ಕತ್ತಿಯಲ್ಲಿ ಮೀಮಾಂಸಕನ ಮೂಗನ್ನು ಕೊಯ್ದು ವೈಶೇಷಿಕ ಎಂಬ ಸಿದ್ಧಾಂತದ ಇಟ್ಟಿಗೆಯಲೊರಸಿ, ಸೃಷ್ಟಿಕರ್ತನೆಂಬ ಕನ್ನಡಿಯ ತೋರುವೆನು." ಹೀಗೆ ಗುರು ಬಸವಣ್ಣನವರು ಸೃಷ್ಟಿಕರ್ತನ ಹಿರಿಮೆಯನ್ನು ಎತ್ತಿ ಹಿಡಿಯುವರು.

745.ಭಕ್ತಿ ಗಜದ ಶಕ್ತಿ

ಪಂಚಬ್ರಹ್ಮವ ಕೆಡಿಸಿತ್ತು; ಪ್ರಣವ ಮಂತ್ರವನೀಡಾಡಿತ್ತಲ್ಲಾ;
ಕರ್ಮಂಗಳನೆ ಕಳೆಯಿತ್ತು; ಕ್ರೀಗಳನೆ ಮೀರಿತ್ತಲ್ಲಾ;
ಆಗಮದ ಹಲ್ಲ ಕಳೆಯಿತ್ತು
ಲಿಂಗದೇವಯ್ಯನ ಭಕ್ತಿಗಜ, ಹೊ! –ಬ.ವ.ದೀ 745

ಶಿವನಿಗೆ ಐದು ಮುಖಗಳಿವೆ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ ಎಂದು ಶಾಸ್ತ್ರಗಳಲ್ಲಿ ಹೇಳಲಾಗಿದೆ. ಪ್ರಣವ ಮಂತ್ರವೇ ಶಾಸ್ತ್ರಗಳಲ್ಲಿ ಸರ್ವಶ್ರೇಷ್ಠ ಮಂತ್ರ ಅದರ ಪಠಣದಿಂದಲೇ ಮುಕ್ತಿ ಎಂದೂ ಹೇಳಲಾಗುವುದು. ದೇವನನ್ನೊಲಿಸಲು ಅನೇಕ ಆಚಾರಗಳನ್ನು ಕರ್ಮಗಳನ್ನು ಮಾಡಬೇಕು. ಹಲವಾರು ಕ್ರಿಯೆಗಳನ್ನು ಅಳವಡಿಸಿಕೊಳ್ಳಬೇಕು. ಮತ್ತು ಇವೆಲ್ಲ ಆಗಮಶಾಸ್ತ್ರದ ಪ್ರಕಾರ ಕ್ರಮ ಬದ್ಧವಾಗಿ ಇರಬೇಕು ಎಂದೆಲ್ಲ ಸಾಂಪ್ರದಾಯಿಕವಾಗಿ ಹೇಳಲಾಗುವುದು. ಆದರೆ ಭಕ್ತಿಯು ಈ ಎಲ್ಲ ಶಾಸ್ತ್ರಗಳನ್ನು, ಕ್ರಿಯೆಗಳನ್ನು ಮೀರಿದ ಶಕ್ತಿ, ಆನೆಯು ಹೇಗೆ ತೋಟಕ್ಕೆ ನುಗ್ಗಿದರೆ ಗಿಡಗಳನ್ನು ಕಿತ್ತೆಸೆದು, ಬಾಳೆಗಿಡಗಳನ್ನು ಈಡಾಡಿ, ಎಲ್ಲವನ್ನೂ ನಡುಗಿಸುತ್ತದೋ ಹಾಗೆ ಲಿಂಗದೇವನ 'ಭಕ್ತಿಗಜ" ಸಾಂಪ್ರದಾಯಿಕ ಎಲ್ಲೆಯನ್ನು ದಾಟಿದ್ದು.

746.ಶಾಸ್ತ್ರವ ಮೀರಿನ ಶಕ್ತಿ–ಭಕ್ತಿ

ವೇದ ನಡುನಡುಗಿತ್ತು ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತ್ತಯ್ಯಾ!
ತರ್ಕ ತರ್ಕಿಸಲರಿಯದೆ ಮೂಗುವಟ್ಟಿದ್ದಿತ್ತಯ್ಯಾ!
ಆಗಮ ಹೆರತೊಲಗಿ ಅಗಲಿದ್ದಿತಯ್ಯಾ,
ನಮ್ಮ ಕೂಡಲ ಸಂಗಯ್ಯನು ಚನ್ನಯ್ಯನ ಮನೆಯಲುಂಡ ಕಾರಣ!
–ಬ.ವ.ದೀ 746.

ವೇದ, ಶಾಸ್ತ್ರ, ತರ್ಕ, ಆಗಮ ಮುಂತಾದುವೆಲ್ಲವು, ಸಮಾಜಕ್ಕೆ ಒಂದು ಬಿಗಿಯಾದ ಚೌಕಟ್ಟನ್ನು ಹಾಕಿದ್ದವು. ಅದೇ ವರ್ಣಾಶ್ರಮ ಸಮಾಜ ವ್ಯವಸ್ಥೆ ಅದರ ವಿಷಫಲವೇ ಅಸ್ಪೃಶ್ಯತೆ, ಅಸ್ಪೃಶ್ಯನು ಊರೊಳಗೆ ಸಂಚರಿಸುವಂತಿಲ್ಲ, ಅವನ ನೆರಳು ಸವರ್ಣೀಯರ ಮೇಲೆ ಬೀಳುವಂತಿಲ್ಲ, ಅವನಿಗೆ ಯಾವುದೇ ಧಾರ್ಮಿಕ ಸಂಸ್ಕಾರ ನಿಷಿದ್ಧ ಮಾತ್ರವಲ್ಲ ಊರೊಳಗೆ ಮುಕ್ತವಾಗಿ ತಿರುಗಾಡುವಂತಿಲ್ಲ, ಇದನ್ನು ಈ ಎಲ್ಲ ಶಾಸ್ತ್ರಗಳು ಸಮರ್ಥಿಸುತ್ತಿದ್ದವು. ಈ ಎಲ್ಲ ಧರ್ಮಶಾಸ್ತ್ರಗಳಿಗೆ ಆಘಾತ ನೀಡುವಂತಹ ಘಟನೆಯೊಂದು ನಡೆಯಿತು. ಅದುವೇ ಶಿವನು ಚೋಳರಾಜನ ಭಕ್ಷ್ಯಭೋಜ್ಯಕ್ಕಿಂತಲೂ ಮಾದಾರ ಚನ್ನಯ್ಯನೆಂಬ ಓರ್ವ ಶಿವಭಕ್ತನ ಮನೆಗೆ ಸಾರಿ ಅಂಬಲಿಯನ್ನು ಉಂಡುದು. ಆತ ಜಾತಿಯಿಂದ ಮಾದಾರ, ವೃತ್ತಿಯಿಂದ ಹುಲ್ಲು ಒದಗಿಸುವವನು; ಮನೆ ನೋಡಿದರೆ ಗುಡಿಸಲು! ವರ್ಣ, ವರ್ಗ, ಜಾತಿ ಮೂರನ್ನೂ ಧಿಕ್ಕರಿಸಿದ ಪ್ರಸಂಗವಿದು. ಇದನ್ನು ನೋಡಿ ವರ್ಣಾಶ್ರಮ ವ್ಯವಸ್ಥೆ ದೇವ ನಿರ್ಮಿತ, ಅಪರ್ವತನೀಯ ಎಂದು ವಾದಿಸುತ್ತಿದ್ದ ವೇದಗಳು ತಮ್ಮ ಮೂಲಕ್ಕೆ ಕೊಡಲು ಏಟು ಬಿದ್ದಿತಲ್ಲ ಎಂದು ನಡುಗಿಬಿಟ್ಟವು. ಶಾಸ್ತ್ರಗಳು ಸದ್ದಿಲ್ಲದೆ ಪಕ್ಕಕ್ಕೆ ಸರಿದವು. ತರ್ಕ ವಾದ ಮಾಡಲರಿಯದೆ ಮೂಗನ್ನು ಏರಿಸಿತು. ಆಗಮಗಳು ದೂರಸರಿದು ಬಿಟ್ಟವು. ಹೀಗೆ ಶಿವನು ಮಾದಾರ ಚನ್ನಯ್ಯನ ಮನೆಯಲ್ಲಿ ಉಂಡುದು ಒಂದು ಕ್ರಾಂತಿಕಾರಿ ಪ್ರಸಂಗವಾಯಿತು, ಸಾಂಪ್ರದಾಯಿಕ ಸಾಮಾಜಿಕ ವ್ಯವಸ್ಥೆಯ ಹಲ್ಲನ್ನು ಮುರಿಯಿತು.

747. ಶಿವನೊಬ್ಬನೇ ದೈವ

ಚಿಕ್ಕದೊಂದು ಹೊತ್ತಗೆ ಬೆನಕನ ಕರಡಿಗೆಯಯ್ಯಾ,
ನೀನುಂಡುಟ್ಟ ಗೊರವನಯ್ಯಾ
ಪುಣ್ಯವೇನಾದಡಾಗಲಿ ಡಕ್ಕೆಯ ಮೇಲೆ ಅಕ್ಕಿಯ ತಳಿದೆನು
ನಮ್ಮ ಕೂಡಲಸಂಗಮದೇವನಲ್ಲದೆ
ಅನ್ಯ ದೈವ ಉಂಟೆನ್ನದಿರರು ಕಂಡಾ! –ಬ.ವ.ದೀ 747

ಮೊದಲನೆಯ ವಾಕ್ಯ ಅರ್ಥವಾಗುತ್ತಿಲ್ಲ, ಕೆಲವು ಜನಪದ ಆಚರಣೆಗಳು ಸ್ಥಳೀಯ ದೈವಗಳ ಸುತ್ತ ಇರುತ್ತವೆ. ಅಂಥ ಆಚರಣೆಗೆ ಸಂಬಂಧಿಸಿದ್ದು ಇರಬಹುದು, ಶಿವನೇ ನೀನು ಭಕ್ತರಿಂದಲೇ ಕಾಡಿ, ಬೇಡಿ (ಮಾದಾರ ಚನ್ನಯ್ಯನಿಂದ, ಸಿರಿಯಾಳನಿಂದ) ಉಂಡು, (ದೇವರ ದಾಸಿಮಯ್ಯನಿಂದ ವಸ್ತ್ರವನ್ನು ಬೇಡಿ) ಉಟ್ಟ ಗೊರವನು (ಶೈವ ಸನ್ಯಾಸಿ) ಆದರೂ ನಾನು ನಿನ್ನ ಪರವಾಗಿ ಸವಾಲು ಎಸೆಯುತ್ತೇನೆ. ಡಕ್ಕೆ ಎನ್ನುವ ನಗಾರಿಯ ಮೇಲೆ ಅಕ್ಕಿಯನ್ನು ಹಾಕಿ ಸವಾಲನ್ನು ಒಡ್ಡುತ್ತೇನೆ" ನಮ್ಮ ಶಿವ (ಕೂಡಲ ಸಂಗಮದೇವ)ನಲ್ಲದೆ ಅನ್ಯ ದೈವವಿಲ್ಲ" ಎಂದು, ಇದೂ ಸಹ ಏಕದೇವತಾ ಉಪಾಸನೆಯ ವಚನ. (ಮುಂದುವರೆಯುವುದು...)

ಶರಣ ಬಂಧುಗಳಲ್ಲಿ ವಿನಂತಿ

ಕಲ್ಯಾಣ ಕಿರಣ ತಲುಪದಿದ್ದಲ್ಲಿ ನಿಮ್ಮ ಚಂದಾ ಸಂಖ್ಯೆ, ಪೂರ್ಣ ವಿಳಾಸ, ಪಿನ್‌ಕೋಡ್, ದೂರವಾಣಿ ಸಂಖ್ಯೆ ಯಾವ ತಿಂಗಳು ತಲುಪಿಲ್ಲ, ಸವಿವರವಾಗಿ ಈ ದೂರವಾಣಿ ಸಂಖ್ಯೆಗಳಿಗೆ 7760627640, 8892912123 ಎಸ್.ಎಂ.ಎಸ್. ಮುಖಾಂತರ ಕಳುಹಿಸಿರಿ.

ಶರಣ ರತ್ನ ಪ್ರಶಸ್ತಿ

ಬಸವ ಧರ್ಮಕ್ಕಾಗಿ ಶ್ರಮಿಸಿದ ಶರಣ ಬಂಧುಗಳಿಗೆ 'ಶರಣ ರತ್ನ' ಪ್ರಶಸ್ತಿ ಕೊಡಬೇಕೆಂದು ಉದ್ದೇಶಿಸಿ 2012ರ ಸಾಲಿಗೆ ಮೂವರನ್ನು ಆಯ್ಕೆ ಮಾಡಲಾಗಿದೆ. ಅವರ ಸಂಕ್ಷಿಪ್ತ ಪರಿಚಯ ಕೆಳಗೆ ಕೊಡಲಾಗಿದೆ. ಪ್ರಶಸ್ತಿಯು ನಾಮಫಲಕವನ್ನು ಮತ್ತು 10 ಸಾವಿರ ರೂಗಳ ಹಣವನ್ನು ಒಳಗೊಂಡಿರುತ್ತದೆ.

1.ಶರಣ.ಎನ್.ಪುಟ್ಟರುದ್ರ, ಬೆಂಗಳೂರು

ಕರ್ನಾಟಕ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಸೂಪರಿಂಟೆಂಡ್ ಇಂಜನಿಯರ್ ಆಗಿ ನಿವೃತ್ತಿ ಹೊಂದಿ, ದಕ್ಷ ಅಧಿಕಾರಿಗಳಾಗಿ ಕೆಲಸ ಮಾಡಿದವರು. ನಿವೃತ್ತಿಯ ನಂತರ ತಮ್ಮ ಸಂಪೂರ್ಣ ಸಮಯವನ್ನು ಸಮಾಜ ಸೇವೆಗಾಗಿ ಮೀಸಲಿಟ್ಟಿರುವವರು. ಹಲವಾರು ಸಂಸ್ಥೆಗಳಲ್ಲಿ ಟ್ರಸ್ಟಿಗಳಾಗಿ, ಸಲಹೆಗಾರರಾಗಿ ಸೇವೆ ಗೈದಿದ್ದಾರೆ. ಅವರು ಹೆಚ್ಚು ಸೇವೆ ಸಲ್ಲಿಸಿರುವ ಸಂಸ್ಥೆಗಳೆಂದರೆ ಸಂಪನ್ನಪ್ಪ ಹಾಸ್ಟೆಲ್, ಬಿ.ಕೆ.ಮರಿಯಪ್ಪ ಹಾಸ್ಟೆಲ್, ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್, ಬಿ.ಕೆ.ಮರಿಯಪ್ಪ ಹಾಸ್ಟೆಲಿನಲ್ಲಿ ಓದಿದ ಅನೇಕ ಬಡವಿದ್ಯಾರ್ಥಿಗಳು ಇಂದು ಉನ್ನತ ಹುದ್ದೆಗಳಿಗೆ ಏರಿದ್ದಾರೆ. ಲಿಂಗಾಯತ ಧರ್ಮ ಮಹಾಸಭಾದ ಅಧ್ಯಕ್ಷರಾಗಿ ಸುದೀರ್ಘ ಅವಧಿಯವರೆಗೆ ಸೇವೆ ಸಲ್ಲಿಸಿದ್ದಾರೆ. ಇದೀಗ ಕೆ.ಬಸವರಾಜು, ಬೆಳಗಾವಿ ಅವರು ಕಾರ್ಯಾಧ್ಯಕ್ಷರಾದ ಬಳಿಕ ಶರಣ,ಪುಟ್ಟರುದ್ರ ಅವರು ಗೌರವಾಧ್ಯಕ್ಷರಾಗಿ ಮಾರ್ಗದರ್ಶನ ಮಾಡುತ್ತಿದ್ದಾರೆ. ಅವರ ಜೀವನವೇ ಒಂದು ತಪಸ್ಸು, ಸೇವೆಯೇ ಪೂಜೆ. ಶ್ರೀಗಂಧದಂತೆ ಅವರ ಜೀವನದ ಕ್ಷಣಗಳನ್ನು ಸವೆಸುತ್ತಿದ್ದಾರೆ.

2. ಶರಣ.ಕೆ.ಎನ್.ಸಾವಳಪ್ಪನ್, ಹೊಸೂರು, ತಮಿಳುನಾಡು.

ಜನಿಸಿದ್ದು ದಿ,11-10-1936ರಂದು, ಸಿವಿಲ್ ಇಂಜನಿಯರಿಂಗ್‌ದಲ್ಲಿ 1957ರಲ್ಲಿ ಡಿಪ್ಲೊಮಾ ಮಾಡಿ 1963ರಲ್ಲಿ ಅಮೆರಿಕಾದಲ್ಲಿ ಮಾಸ್ಟರ್ ಡಿಗ್ರಿ ಪೂರೈಸಿದರು. 1957ರಿಂದ 2004ರವರೆಗೆ ವಿವಿಧ ಸಂಸ್ಥೆಗಳಲ್ಲಿ ಕಾಯಕ ಮಾಡುತ್ತಿದ್ದು, 2000 ಇಸವಿಯಲ್ಲಿ ಬಸವ ಸೇವಾ ಟ್ರಸ್ಟ್ ಸ್ಥಾಪಿಸಿದರು. ಅವರ ಜೀವನದ ಧ್ಯೇಯ ವಾಕ್ಯ. "Service is the Highest Religion" ತಮಿಳು ನಾಡಿನ ಹೊಸೂರಿನಲ್ಲಿ ವಾಸ್ತವ್ಯ ಮಾಡಿರುವ ಇವರು ಆದಿವಾಸಿಗಳ ಗ್ರಾಮವಾಗಿರುವ ಕೊಡಕಿರೈ ಎಂಬಲ್ಲಿ ಬಸವ ಗುರುಕುಲ ಆಶ್ರಮವನ್ನು ಸ್ಥಾಪಿಸಿದ್ದಾರೆ. ಅದರಲ್ಲಿ ಒಂದು ಶಾಲೆಯನ್ನು ನಡೆಸುತ್ತಿದ್ದಾರೆ. ಜಿಲ್ಲಾಧಿಕಾರಿಗಳ ಪ್ರೇರಣೆಯಿಂದ 2003ರಲ್ಲಿ ಕೊಡಕಿರೈ ಗ್ರಾಮವನ್ನು ದತ್ತು ತೆಗೆದುಕೊಂಡು 2004ರಲ್ಲಿ ಶಾಲೆ ಪ್ರಾರಂಭಿಸಿದಾಗ 15 ಮಕ್ಕಳು ಸೇರಿದ್ದರು. ಇದೀಗ 5 ರಿಂದ 14 ವರ್ಷದ ವಯಸ್ಸಿನವರೆಗಿನ 300 ಮಕ್ಕಳು ಓದುತ್ತಿದ್ದಾರೆ. ಸುಮಾರು 150 ಮಕ್ಕಳಿಗೆ ವಸತಿ ವ್ಯವಸ್ಥೆಯನ್ನು ಮಾಡಲಾಗಿದೆ. ಅತ್ಯಂತ ಹಿಂದುಳಿದ ಆದಿವಾಸಿ ಜನರ ಸರ್ವಾಂಗೀಣ ಉನ್ನತಿಗೆ ಬಸವ ಸೇವಾ ಟ್ರಸ್ಟ್ ಪ್ರಯತ್ನ ನಡೆಸಿದ್ದು ಗುರು ಬಸವಣ್ಣನವರ ದಾಸೋಹ ತತ್ವವನ್ನು ಅಕ್ಷರಶ: ಕಾರ್ಯರೂಪಕ್ಕೆ ತಂದಿದೆ. ಇದರ ಸಚೇತಕ ಶಕ್ತಿ ಶರಣ.ಕೆ.ಎನ್.ಸಾವಳಪ್ಪನ್ ಅವರು.

3. ಶರಣ.ಬಿ.ಸಿ.ಮಹಾಲಿಂಗಪ್ಪ, ಭದ್ರಾವತಿ

ಭದ್ರಾವತಿ ರಾಷ್ಟ್ರೀಯ ಬಸವ ದಳದ ಶರಣ.ಬಿ.ಸಿ.ಮಹಾಲಿಂಗಪ್ಪನವರದು ಅಪರೂಪದ ಸಾಧನೆ. ಅತ್ಯುತ್ತಮ ರಾಷ್ಟ್ರೀಯ ಬಸವ ದಳಗಳಲ್ಲಿ ಭದ್ರಾವತಿಯದೂ ಒಂದು. ಕಳೆದ ತಿಂಗಳು ದಿ.11-11-2011ರಂದು ಬಸವ ಮಂಟಪ ಕಟ್ಟಡ ನೋಡಿ ಎಲ್ಲರೂ ಬೆರಗಾಗಿ ನಿಂತವರೆ! ಬಸವ ಕರುಣಾಶ್ರಯ ಎಂಬ ಬಡ ಮಕ್ಕಳ ಉಚಿತ ವಿದ್ಯಾರ್ಥಿ ನಿಲಯದ ಕಟ್ಟಡವನ್ನು ಅಂದು

ಉದ್ಘಾಟಿಸಲಾಯಿತು. ಮುಂದಿನ ಜೂನ್‌ನಿಂದ ಮಕ್ಕಳಿಗೆ ಪ್ರವೇಶ ನೀಡಲಾಗುವುದು. ಈ ಕಟ್ಟಡ ಪೂರ್ತಿಯಾಗಲು ಬೇಕಾದ 38 ಲಕ್ಷ ರೂಗಳನ್ನು ಮಹಾಲಿಂಗಪ್ಪನವರು ವೈಯಕ್ತಿಕವಾಗಿ ಒದಗಿಸಿದ್ದಾರೆ ಎಂಬುದು ಗಮನಾರ್ಹ ಸಂಗತಿ. ಬಸವ ಕಲ್ಯಾಣದ 108 ಪುತ್ಥಳಿ ನಿರ್ಮಾಣ ಯೋಜನೆಗೆ ಬಸವ ಧರ್ಮ ಪೀಠಕ್ಕೆ 10 ಲಕ್ಷರೂಗಳನ್ನು ಕೊಟ್ಟಿದ್ದಾರೆ. ಲೆಕ್ಕವಿಡದೆ ಎಲ್ಲ ಯೋಜನೆಗಳಿಗೂ ಸಹಾಯ ಮಾಡಿದ್ದಾರೆ, ಮಾಡುತ್ತಿದ್ದಾರೆ. ಭದ್ರಾವತಿಯ ಕಾಗದದ ಕಾರ್ಖಾನೆಯಲ್ಲ ಕಾಯಕ ಮಾಡುತ್ತಿದ್ದಾರೆ.ಎಲ್ಲ ರೀತಿಯಿಂದಲೂ ಪ್ರೇರಕರಾಗಿರುವವರು ಪತ್ನಿ ರತ್ನಮ್ಮನವರು ಮತ್ತು ಮಕ್ಕಳಾದ ಶಶಿಧರ, ಶ್ರೀಧರ ಅವರುಗಳು.

ಶರಣ ಮೇಳ

ಶರಣ ಮೇಳ, ಈ ಹೆಸರು ಕೇಳುತ್ತಿದ್ದಂತೆ ಒಂದು ರೀತಿಯ ವಿದ್ಯುತ್ ಸಂಚಾರ ಆದಂತಾಗುತ್ತದೆ. ಸೂಜಿಕಲ್ಲಿನಂತೆ ಶರಣರನ್ನು ಅಧ್ಯಾತ್ಮ ಜೀವಿಗಳನ್ನು, ಬಸವಾಭಿಮಾನಿಗಳನ್ನು ಸೆಳೆಯುತ್ತದೆ. ಎಲ್ಲರೂ ಕೂಡಲಸಂಗಮದತ್ತ ಧಾವಿಸುತ್ತಾರೆ. ಈ ಕಾರ್ಯಕ್ರಮದ ಮೌಲ್ಯದ ದೃಷ್ಟಿಯಿಂದ ಮತ್ತಾವುದೇ ಕಾರ್ಯಕ್ರಮಕ್ಕೆ ಹೋಲಿಸಲಿಕ್ಕಾಗದು. ಅಲ್ಲಿನ ಊಟ ಮತ್ತು ವಸತಿಯ ವ್ಯವಸ್ಥೆ ದೋಷರಹಿತ, ಪರಿಪೂರ್ಣ.

ಧರ್ಮಕರ್ತ ಬಸವೇಶ್ವರರ ಐಕ್ಯಕ್ಷೇತ್ರ ಕೂಡಲಸಂಗಮ ಅಂದಿನಿಂದಲೂ ಪವಿತ್ರವಾದುದು. ಅದನ್ನು ಗುರ್ತಿಸಿ ಅರ್ಥಪೂರ್ಣ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು 1988ರಿಂದ ಅದೂ ಬಸವ ಧರ್ಮ ಪೀಠದ ಪೀಠಾಧೀಶರುಗಳಾದ ಲಿಂ. ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರುಗಳಾದ ಲಿಂಗಾನಂದರು ಮತ್ತು ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿ ತಾಯಿಯವರು. ಅವರ ಚಿಂತನೆಯ ಮೂಸೆಯಲ್ಲಿ ಹೊರ ಹೊಮ್ಮಿದ ಅಪೂರ್ವ ಕಾರ್ಯಕ್ರಮ ಈ ಶರಣಮೇಳ.

ಅಲ್ಲಿ ಶರಣರು ಪರಸ್ಪರರು ಭೇಟಿಯಾದಾಗ ಶರಣು ಶರಣಾರ್ಥಿ ಎಂದು ಉದ್ಗರಿಸಿ ಆನಂದ ತುಂದಿಲರಾಗುತ್ತಾರೆ. ಅಲ್ಲಿಗೆ ಬಂದ ಶರಣರು ಕೇವಲ ಕೃಷ್ಣ ಮಲಪ್ರಭ ನದಿಗಳ ಜಲದಲ್ಲಿ ಮೀಯದೆ, ಶರಣ ಮೇಳದ ವಿವಿಧ ಗೋಷ್ಠಿಗಳಲ್ಲಿ ಪೂಜ್ಯರು, ಅನುಭಾವಿಗಳು ಹರಿಸಿದ ತತ್ತ್ವ ಸಂದೇಶಗಳ ಅಧ್ಯಾತ್ಮಿಕ ಜಲಧಾರೆಗಳಲ್ಲಿ ಮಿಂದು ಪಾವನರಾಗುತ್ತಾರೆ. ದಿನೇ ದಿನೇ ಅವರಲ್ಲಿ ಹೊಸ ಚೈತನ್ಯ, ಆತ್ಮವಿಶ್ವಾಸದಿಂದ ಚೈತನ್ಯಭರಿತರಾಗಿ ಸಡಗರದಿಂದ ಕಾರ್ಯಕ್ರಮಗಳಲ್ಲಿ ಓಡಾಡುತ್ತಾರೆ. ಧರಿಸಿದ ಬಿಳಿಯ ಉಡುಪು, ಮೇಲೆ ಹೊದ್ದ ಕಾವಿಬಣ್ಣದ ಸ್ಕಾರ್ಫ್, ಬಸವರಕ್ಷೆಯ ವಸ್ತ್ರ ಕಾರ್ಯಕ್ರಮದಲ್ಲಿ ಹಾಜರಾದ ಶರಣರಿಗೆ ವಿಶೇಷ ಮೆರಗನ್ನು ಕೊಡುತ್ತವೆ.

ಚಿಂತನಗೋಷ್ಠಿಗಳು ಭಕ್ತರಿಗೆ ಸ್ವತಂತ್ರ ಚಿಂತನಶಕ್ತಿಯನ್ನು ಉದ್ದೀಪನಗೊಳಿಸುತ್ತವೆ. ಅಲ್ಲಿ ನಡೆಯುವ ಯೋಗ ತರಗತಿಗಳು, ಇಷ್ಟಲಿಂಗ ಪೂಜಾ ಪ್ರಾತ್ಯಕ್ಷಿಕೆ, ಪ್ರಾರ್ಥನಾ ಕಾರ್ಯಕ್ರಮಗಳು ದೈಹಿಕ ಮತ್ತು ಮಾನಸಿಕ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ. ಪ್ರೇಕ್ಷಕರಾಗಿ ಕಾರ್ಯಕ್ರಮದಲ್ಲಿ ಕುಳಿತರೆ ಮೇಲೇಳಲು ಮನಸ್ಸು ಬರುವುದಿಲ್ಲ. ಒಟ್ಟಿನಲ್ಲಿ 21ನೇ ಶತಮಾನದ ನಮ್ಮನ್ನು 12ನೇ ಶತಮಾನದ ಕಲ್ಯಾಣ ರಾಜ್ಯಕ್ಕೆ ಕರೆದೊಯ್ಯುವ ಕಾರ್ಯಕ್ರಮವಾಗಿದೆ. ಇಂಥಾ ಅಪೂರ್ವ ಕಾರ್ಯಕ್ರಮದ ರೂವಾರಿಗಳು ಲಿಂ.ಪೂಜ್ಯ ಅಪ್ಪಾಜಿ ಮತ್ತು ಪೂಜ್ಯ ಮಾತಾಜಿಯವರು.

ಎಡ್ಗರ್ ಕೈಸಿ ಹೇಳುವಂತೆ "ತಕ್ಕ ಪರಿಸರವಿಲ್ಲದೆ ಆತ್ಮಗಳು ಜನ್ಮ ತಾಳವು" 12ನೇ ಶತಮಾನದಲ್ಲಿ ಬಸವಕಲ್ಯಾಣದಲ್ಲಿ ಶರಣ ಧರ್ಮದಲ್ಲಿ ಬದುಕಿ ತಮ್ಮ ಜೀವನದ ಸಾರ್ಥಕತೆಯನ್ನು ಕಂಡು ಸಾವಿರಾರು ಆತ್ಮಗಳು 21ನೇ ಶತಮಾನದಲ್ಲಿ ಈ ಶರಣ ಸಂಸ್ಕೃತಿಯಲ್ಲಿ ಒಡನಾಡಿಗಳಾಗಿ ತಮ್ಮ ಜೀವನವನ್ನು ಸಾರ್ಥಕ ಪಡಿಸಿಕೊಳ್ಳುತ್ತಿರುವುದು ಸತ್ಯದ ಸಂಗತಿಯಾಗಿದೆ. ಈ ಅವಕಾಶವನ್ನು ಕಲ್ಪಿಸಿಕೊಟ್ಟ ಪೂಜ್ಯರು ಗಳಿಗೆ ಭಕ್ತಿಪೂರ್ವಕ ಕೃತಜ್ಞತೆಯನ್ನು ಹೊಂದಿ ಲಕ್ಷಾಂತರ ಹೃದಯಗಳು

ಮಿಡಿಯುತ್ತಿರುವುದು ಸರ್ವವಿದಿತ.

15ನೇ ಶತಮಾನದಲ್ಲಿ ಯುರೋಪಿನಲ್ಲಿ ಕ್ರೈಸ್ತ ಧರ್ಮದ ಪಾದ್ರಿಗಳು ಬೈಬಲ್‌ನ್ನು ಮರೆತು ದಾರಿ ತಪ್ಪಿದಾಗ ಜರ್ಮನಿಯ ಮಾರ್ಟಿನ್ ಲೂಥರ್ ಸತ್ಯ ಸಂಗತಿಯನ್ನು ತಿಳಿದು ಕ್ರೈಸ್ತ ಅನುಯಾಯಿಗಳಿಗೆ ಹೀಗೆ ಕರೆಕೊಟ್ಟರು. "Go back to Bible" ಎಂದು ಹೇಳಿ ಆ ಧರ್ಮವನ್ನು ಸರಿ ದಾರಿಗೆ ತಂದಿದ್ದರು. ಹಾಗೆಯೇ 20ನೇ ಶತಮಾನದಲ್ಲಿ ಲಿಂಗಾಯತ ಮಠ ಪೀಠಾಧಿಕಾರಿಗಳು ಪ್ರವಾದಿ ಬಸವೇಶ್ವರರು ತೋರಿದ ಪಥವನ್ನು ಬಿಟ್ಟು ವಚನ ಸಾಹಿತ್ಯವನ್ನು ಧಿಕ್ಕರಿಸಿ ನಡೆಯುತ್ತಿದ್ದರು. ಅವರ ನಡೆ ನುಡಿಗಳು ವಚನ ಸಂಹಿತೆಗೆ ವಿರುದ್ಧವಾಗಿವೆ. ಆದುದರಿಂದ ಲಿಂಗಾಯತ ಧರ್ಮೀಯರು "Go back to Vachana Literature" ವಚನ ಸಾಹಿತ್ಯವನ್ನು ಅಧ್ಯಯನ ಮಾಡಿ ಎಂದು ಪೂಜ್ಯ ಲಿಂಗಾನಂದರು ಕರೆಕೊಟ್ಟರು. ಸತ್ಯದ ನಿಲವನ್ನರಿತು ಲಕ್ಷ ಲಕ್ಷ ಜನ ಇವರತ್ತ ಬಂದರು, ಹೀಗೆ ಶರಣರ ಪಡೆಯನ್ನೇ ಕಟ್ಟಿದರು.

19ನೆಯ ಶತಮಾನದಲ್ಲಿ ಭಾರತದಲ್ಲಿ ಹಿಂದು ಧರ್ಮದಲ್ಲಿ ಮೂಢಾಚಾರಗಳು ಹೆಚ್ಚಾದಾಗ ಆರ್ಯ ಸಮಾಜದ ಸ್ಥಾಪಕ ದಯಾನಂದ ಸರಸ್ವತಿ "Go back to Vedas" ಎಂದು ಘರ್ಜಿಸಿದರು.

ಗ್ರೀಕ್ ನಾಗರಿಕತೆಯ ಕಾಲದಲ್ಲಿದ್ದ ತತ್ತ್ವಜ್ಞಾನಿ ಪ್ಲೇಟೊ ಹೀಗೆ ಹೇಳಿದ "Thank God, I am born when socretis alive" ನಾವು ಹೀಗೆ ಉದ್ಗರಿಸಬಹುದು "Thank God, we have born when Appaji-Mathaji-alive" ಮುಂದುವರಿದು ಪ್ಲೇಟೋ ಹೀಗೆ ಹೇಳುವನು. "Thank God, I am born a Greek not a Slave" ನಾವು ಹೀಗೆ ಹೇಳಬಹುದು. "Thank God, I have born as Lingayath not any other" ಇಂಥಾ ಪೂಜ್ಯರನ್ನು ಪಡೆದ ನಾವೇ ಧನ್ಯರೆಂದು ಭಾವಿಸಿ ನಮ್ಮ ಬದುಕು ಸಾರ್ಥಕವಾಯಿತೆಂದು ತಿಳಿದು ಶರಣ ಮೇಳದತ್ತ, ಕಲ್ಯಾಣ ಪರ್ವದತ್ತ ಧಾವಿಸೋಣ.

ಶರಣು ಶರಣಾರ್ಥಿಗಳು,

ಬಾಣೂರು ಚೆನ್ನಪ್ಪ

ಶರಣ ಮೇಳದ ಕೀರ್ತಿ ಪೂಜ್ಯ ಮಾತಾಜಿಯವರು.

- ಶಾರದಾ ಬಸವರಾಜು, ಭದ್ರಾವತಿ.

ಎನಿತು ಬಣ್ಣಿಸಲಿ ಗುರುವೆ
ಬಸವಾಕ್ಷರ ತ್ರಯದಲ್ಲಿ ಪ್ರಜ್ವಲಿಸುತ್ತಿರುವ ಬಸವಾತ್ಮಜೆಯೇ
ಗುರುಬಸವ ತಂದೆಯ ಆದರ್ಶ ಹೊತ್ತು
ಸಾಗುತಿಹ ಬಸವ ಗುರು ಚಿತ್ಕಳೆಯೆ
ಬಸವ ಭಾಸ್ಕರನ ತೇಜದಿಂ ಬಸವ ಚಂದ್ರಿಕೆಯಾಗಿ
ಜಗದ ಬಾನಂಗಳದಿ ಬಸವ ಬೆಳದಿಂಗಳ ಚೆಲ್ಲುತಿಹೆ
ಅಂದು ಅಲ್ಲಮ ಪ್ರಭುವು ಗುರುಬಸವಣ್ಣನೆಂಬ
ಗೌರಿಶಂಕರವನ್ನಳೆಯಲು ಹೋಗಿ ಸೋಜಿಗಪಟ್ಟಂತೆ
ಇಂದು ಬಸವಾತ್ಮಜೆಯೆಂಬ ನಾಮವಂ ಧರಿಸಿ
ಧರೆಗಿಳಿದ ಜಗನ್ಮಾತೆ ಅಕ್ಕನ ಅವತಾರಿ
ಮಾತಾಜಿಯೇ ನಿಮ್ಮ ಕಾಯ, ಬಾಳುವೆರಿ, ಚಿಂತೆ, ಸಮಯವೆಲ್ಲವೂ
ಮನುಕುಲೋದ್ಧಾರಕ ಗುರು ಬಸವ ತಂದೆಯಂತೆ
ಗಂಧದ ಕೊರಡಿನಂತೆ ಸವೆಯುತಿದೆ
ಷಡಾಚಾರ ಸಂಪನ್ನೆಯಾಗಿ ಸರ್ವಾಚಾರ
ಸಂಪತ್ತು ಗಳಿಸಿಕೊಂಡ ಎನ್ನಾತ್ಮಜೆಯ
ದೃಷ್ಟಿಪರುಷ, ಹಸ್ತಪರುಷ, ಮನಪರುಷ
ಭಾವಪರುಷವಾಗಿ ಅಂಗೇಂದ್ರಿಯಗಳೆಲ್ಲಾ
ಲಿಂಗೇಂದ್ರಿಯಗಳಾಗಿ ತನು,ಮನ,ಧನವ
ಗುರು ಲಿಂಗ ಜಂಗಮಕ್ಕೆ ಸಮರ್ಪಿಸುತ್ತಿರುವ
ಏಕೈಕ ಸ್ತ್ರೀ ಕುಲಕ್ಕೆ ಕಳಶವಿಟ್ಟ ಗುರುವೆ
ಭಕ್ತಿ ಜ್ಞಾನ ಕ್ರಿಯೆ -ವಿರಕ್ತಿಯ ಸಂಗಮದೊಳು
ಕಂಗೊಳಿಸುತ್ತಿರುವ ಗುರುಬಸವ ಪುತ್ಥಳಿಯೆ
ನಿಮ್ಮ ಘನ ವ್ಯಕ್ತಿತ್ವವನ್ನಳೆಯಲು ಆಕಾಶದಲ್ಲಿರುವ
ನಕ್ಷತ್ರಗಳ ಎಣಿಸುವಂತೆ ಸೋಜಿಗವೆನಿಸುತ್ತದೆ.
ಆಹಾ ಎನ್ನ ಗುರುವೆ ಕಲ್ಪ ತರುವೆ
ನಿಮ್ಮನ್ನು ನಾನು ಹೇಗೆ ಬಣ್ಣಿಸಲಿ?
ನೀವು ನಡೆಸುವ ಶರಣ ಮೇಳ, ಗಣಮೇಳ
ಕಲ್ಯಾಣಪರ್ವಗಳಲ್ಲಿ ಏನೇ ಅಡೆ ತಡೆ ಬಂದರೂ
ಕೆಚ್ಚೆದೆಯ ಕಲಿಯಂತೆ ಹೋರಾಡಿ ಜಯ ಗಳಿಸಿದಿರಿ.
ಇದಕ್ಕೆ ಸಾಕ್ಷಿ ಎಂಬಂತೆ ವಿಜೃಂಭಿಸುತಿದೆ
ಇಪ್ಪತ್ತೈದನೆಯ ಶರಣ ಮೇಳ
ಬರೆದಾಯಿತು ಇನ್ನು ಇತಿಹಾಸ
ಸಂಪುಟದಲ್ಲಿ ನಿಮ್ಮ ಮಹತ್ಕಾರ್ಯ
ಭಲೇ ಬಸವ ತತ್ತ್ವದ ವೀರ ವಿರಾಗಿಣಿಯೇ ಶರಣು ನಿಮಗೆ
ಬಸವ ತತ್ತ್ವದ ಕೀರ್ತಿ ಪತಾಕೆಯ
ಗೌರಿ ಶಂಕರ ಮೀರಿ ಪೇರಿಸಿದಿರಿ
ಕರ್ನಾಟಕದಾದ್ಯಂತ ಬಸವ ಮಂಟಪಗಳ ನಿರ್ಮಿಸಿ
ಬಸವ ಮೂರ್ತಿಗಳ ಪ್ರತಿಷ್ಠಾಪನೆಗೈದು
ಎತ್ತೆತ್ತ ನೋಡಿದರೂ ಬಸವನೆಂಬ ಬಳ್ಳಿ ಹಬ್ಬಿಸಿ
ಬಸವಯುಗ ಮತ್ತೊಮ್ಮೆ ಮರುಕಳಿಸುವಂತೆ ಮಾಡಿದಿರಿ
ಗುರು ಬಸವ ತಂದೆ ಅಡಿಯಿಟ್ಟ ಕ್ಷೇತ್ರವೆಲ್ಲ
ಅವಿಮುಕ್ತ ಕ್ಷೇತ್ರವಾದಂತೆ ಗುರು ಮಾತಾಜಿ
ಅಡಿಯಿಟ್ಟ ಕೂಡಲಸಂಗಮ, ಬಸವ ಕಲ್ಯಾಣ
ಪುನರ್ ದಿವ್ಯ ಕ್ಷೇತ್ರಗಳಾಗಿವೆ.
ಇನ್ನು ಸಾಹಿತ್ಯ ಕ್ಷೇತ್ರದಲ್ಲಿ ಮೇರುಕೃತಿಗಳ ರಚಿಸಿ
ಮೈಲುಗಲ್ಲಾಗಿವೆ. ಪ್ರವಚನದ ಪಟುವಾಗಿ
ಪ್ರವಚನಕಾರರ ನಿರ್ಮಿಸಿದ ಭಕ್ತಿ ವಾಹಿನಿಯಾಗಿ
ಬಸವ ಭಕ್ತಿ ಗೀತೆಗಳ ರಚಿಸಿ, ಹಾಡಿ ನಿಮ್ಮನ್ನೇ ನೀವು
ಬಸವ ತಂದೆಗೆ ಸಮರ್ಪಿಸಿ ಕೊಂಡಿಹಿರಿ
ಇನ್ನು ಸಾಮಾಜಿಕ, ಧಾರ್ಮಿಕ, ಅಧ್ಯಾತ್ಮಿಕ
ಆರ್ಥಿಕ ನಾನಾ ವಿಧದಲ್ಲಿ ಪಾರಂಗತೆಯಾಗಿರುವ
ಸರ್ವೋತ್ಕೃಷ್ಟ ಪ್ರತಿಭಾವಂತ ಪ್ರಭಾವಳಿಯೇ
ನಿಮ್ಮ ಮತಿಯೆಂಬ ಪಾತ್ರೆಯಲ್ಲಿ ಎಂತಹ
ಅನರ್ಘ್ಯ ರತ್ನವ ಕಂಡು ಹಿಡಿದ ಮಹಾ ವಿಜ್ಞಾನಿಯಾದೆ
ಜ್ಞಾನದ ಖಣಿಯೇ ಚಿನ್ನದ ಗಣಿಯೆ ಅಧ್ಯಾತ್ಮ ಅರಗಿಣಿಯೆ
ಗುರು ಬಸವಣ್ಣನವರ ಅಪಾರವಾದ ಮಹಾಜ್ಞಾನ
ಸಂಪತ್ತು ಪಡೆದು ಬಸವೈಶ್ವರ್ಯ ಸಿರಿಯಾಗಿ

ಭಕ್ತಿ ಭಂಡಾರಿ ಶ್ರೀಮಂತ ಗುರು ಬಸವ ಶಿಶು ನೀವಲ್ಲವೆ ?
ಸಚ್ಚಿದಾನಂದ ಪ್ರಿಯೆ ಮಾತಾಜಿ ಗುರುವೆ
25ನೆಯ ಶರಣ ಮೇಳದ ಶುಭಾನಂದದೊಡನೆ
ನಿಮ್ಮಡಿದಾವರೆಗಳಿಗೆ ನಮೋ ನಮೋ ಎಂಬೆನು.

ಐತಿಹಾಸಿಕ ಶರಣ ಮೇಳ

ಶರಣ ಮೇಳವು ಎಂದೂ ಅಳಿಯದ
ವಿಶ್ವದ ದಾಖಲೆ ಸ್ಥಾಪಿಸುತ್ತಿದೆ
ಈ ಕನ್ನಡ ತಾಯಿಯ ಮಡಿಲಲ್ಲಿ
ಬಸವ ತತ್ವದ ಸಿರಿಯಲ್ಲಿ

ಬಸವ ಧರ್ಮ ಪೀಠವ ಸ್ಥಾಪಿಸಿ
ಬಸವ ಕುಡಿಗಳ ವೃದ್ಧಿಸಿದೆ
ಮಾತೆಯ ಮಮತೆಯ ಕರೆಯ ಮೇರೆಗೆ
ಶರಣರ ಸಂಕುಲ ಸೇರುತಿದೆ

ಜಾತೀಯತೆಯ ಮೌಢ್ಯವ ತೊಡೆದು
ಸಮಾನತೆಯ ತತ್ವದಿ ಬೆರೆಸುತಿದೆ
ಅಬಲೆಯರನ್ನು ಸಬಲರ ಮಾಡಿ
ಸ್ತ್ರೀ ಕುಲ ಸ್ವಾತಂತ್ರ್ಯ ಸಾರುತಿದೆ

ಬಸವ ತತ್ವದ ಕೀತಿ ಪತಾಕೆಯ
ಎಲ್ಲೆಡೆ ಹಾರಿಸಿ ಮೆರೆಸುತಿದೆ

ವಚನ ತತ್ವದ ಸೌರಭವನ್ನು
ಶರಣ ಮೇಳದಿ ಪಸರಿಸುತಿದೆ

ಅಷ್ಟಾವರಣವ ಧರಿಸಿದ ಶರಣರು
ಶಿಸ್ತಿನ ಸಿಪಾಯಿಯಂತೆ ಕಾಣುವರು
ಕಾಯಕ ದಾಸೋಹ ಸೇವೆಯಲ್ಲಿ
ತಮ್ಮ ಕಾಯವ ಸವೆಸುವರು

ದಯವೇ ಧರ್ಮದ ಮೂಲವು ಎನ್ನುತ
ಧರ್ಮದ ಬಾಗಿಲ ತೆರೆಯುತಲಿ
ಎಲ್ಲರು ತನ್ನವರು ಎಂಬ ಭಾವದಿ
ಎಲ್ಲರ ಇಲ್ಲಿ ಕೂಡಿಸಿದೆ

ಸಚ್ಚಿದಾನಂದ ಪ್ರಿಯೆ ಮಾತೆಯ ಕನಸು
ಬಸವ ಪಾದಕೆ ಅರ್ಪಿಸಿದೆ
ಸಾಧನೆಯ ಶಿಖರವ ಏರಿದ ಮೇಳವು
ಇತಿಹಾಸದಿ ತಾ ಮೆರೆಯುಲಿದೆ.

ದಾನಿಗಳ ಗಮನಕ್ಕೆ

ತಟ್ಟೆ-ಲೋಟಗಳ ಕೊಡುಗೆಗೆ ಸೂಚನೆ

ಶರಣ ಮೇಳದ ಬೃಹತ್ ದಾಸೋಹಕ್ಕೆ ಶರಣ ಬಂಧುಗಳು ತಟ್ಟೆಗಳನ್ನು ಕೊಟ್ಟುದು ಉಪಯೋಗವಾಗುತ್ತಿದೆ. ಈ ಮಧ್ಯೆ ತಟ್ಟೆ - ಲೋಟಗಳು ಹಳೆಯವಾಗಿವೆ, ಮುರಿದಿವೆ, ಕಳೆದೂ ಹೋಗಿವೆ. ಶರಣ ಮೇಳದ ದಾಸೋಹ ಬೆಳೆಯುತ್ತಲಿದೆ. ಆದ್ದರಿಂದ ಶರಣ ಬಂಧುಗಳಿಂದ ತಟ್ಟೆಗಳ ದಾನ ಅಗತ್ಯವಾಗಿದೆ. 11 ಅಂಗುಲ ಅಗಲ, ಕಂಠವಿರುವ ಸ್ಟೀಲ್ ತಟ್ಟೆಗಳನ್ನು ತಮ್ಮ ತಮ್ಮ ಶಕ್ತ್ಯಾನುಸಾರ ಕೊಂಡು ತಂದು ಶರಣ ಬಂಧುಗಳು ದೇಣಿಗೆಯಾಗಿ ನೀಡಲು ಅವಕಾಶ ಉಂಟು. ಅದೇ ರೀತಿ ನೀರಿನ ಲೋಟ, ಚಿಕ್ಕ ಟೀ ಲೋಟಗಳನ್ನು ತಂದು ಕೊಡಲು ಅವಕಾಶ ಉಂಟು. ಶರಣ ಮೇಳಕ್ಕೆ ತಂದು ಕೊಡಬಹುದು. ಇಲ್ಲವೇ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಶರಣ ಮೇಳ ಪ್ರಚಾರಕ್ಕೆ ಬಂದಾಗ ಕೊಡಬಹುದು.

ಹೋಲ್‌ಸೇಲ್ ಬೆಲೆ ವಿಚಾರಿಸಿದಾಗ 11 ಅಂಗುಲದ ಉತ್ತಮ ಸ್ಟೀಲ್ ತಟ್ಟೆಯ ಬೆಲೆ ಒಂದಕ್ಕೆ 65ರೂ ಇದೆ. ದಾನಿಗಳು ಹಣದ ರೂಪದಲ್ಲೂ ಕೊಡಬಹುದು. ಅವರ ಹೆಸರಿನಲ್ಲಿ ಬೆಂಗಳೂರಿನಲ್ಲಿ ಖರೀದಿಸಲಾಗುತ್ತದೆ. ನೀರಿನ ಲೋಟ 12ರೂ. ಟೀ ಲೋಟ 6 ರೂ. ಬೆಲೆ ಇದೆ. ಅವರವರ ಶಕ್ತ್ಯಾನುಸಾರ ಕೊಡಬಹುದು. ಪ್ರತಿಯೊಬ್ಬ ಶರಣರೂ ಶರಣಮೇಳಕ್ಕೆ ಬರುವಾಗ ಕನಿಷ್ಟ ಒಂದು ತಟ್ಟೆ ಮತ್ತು ಒಂದು ಲೋಟವನ್ನು ತಂದು ಸಮರ್ಪಿಸಿದರೂ ಉಪಕಾರವಾಗುತ್ತದೆ.

- ಜಗದ್ಗುರು ಮಾತೆ ಮಹಾದೇವಿ

ಧರ್ಮಪಿತರ ಕರೆಯೋಲೆ

ಮಮತೆಯ ಮಕ್ಕಳೆ,

ಸೃಷ್ಟಿಕರ್ತ ಲಿಂಗದೇವನ ಸ್ಮರಣೆಯೊಡನೆ ನಿಮಗೆಲ್ಲ ಶುಭಹಾರೈಕೆಗಳು. ನೀವುಗಳೆಲ್ಲ ನನ್ನ ಮಹಾಮನೆಯ ಮಕ್ಕಳು ಲಿಂಗದೇವನ ಪ್ರೇರಣೆಯಂತೆ ನಾನು ಮರ್ತ್ಯದಲ್ಲಿ ಒಂದು ಮಹಾಮನೆಯನ್ನು ಕಟ್ಟಿದೆ. ಇದು ಕೇವಲ ಕಲ್ಲು-ಮಣ್ಣು- ಇಟ್ಟಿಗೆ-ಕಟ್ಟಿಗೆಗಳ ಭೌತಿಕ ಮನೆಯಲ್ಲ; ಒಂದು ತತ್ವ ಸಂಹಿತೆಯನ್ನು ಒಳಗೊಂಡ ಧರ್ಮದ ಮಹಾಮನೆ. ಈ ಮಹಾಮನೆಯನ್ನು ನಾನು ಇದ್ದ ಕಾಲದಲ್ಲಿಯೇ ನೀವು ಪ್ರವೇಶಿಸಿರಬಹುದು, ನಂತರದ ಶತಮಾನದಲ್ಲಿ ಪ್ರವೇಶಿಸಿರಬಹುದು, ಇಂದೇ ನಂಬಿಕೆಯ ಮೂಲಕ, ದೀಕ್ಷೆಯ ಮೂಲಕ ಬಂದಿರಬಹುದು ಎಂದೇ ಬಂದಿರಲಿ ನೀವು ನನ್ನವರು. ನನ್ನವರೆಲ್ಲರೂ ಜಾತಿ ಮತ ಪಂಥ ವೃತ್ತಿ ಅಂತಸ್ತು ಭೇದವಿಲ್ಲದೆ ಒಂದು ಕಡೆ ಸೇರಬೇಕೆಂಬುದೇ ನನ್ನಿಚ್ಛೆ.

ನಿಮಗೆ ಲೌಕಿಕವಾಗಿ ಸೇರುವುದು ಗೊತ್ತು. ಹೆಣ್ಣು ಮಕ್ಕಳಿಗೆ ತೌರು ಮನೆಯಲ್ಲಿ ಆಗಾಗ ಸೇರುವುದು ಗೊತ್ತು. ತಾಯಿ -ತಂದೆ, ಅಕ್ಕ -ತಂಗಿ, ಅಣ್ಣ -ತಮ್ಮಂದಿರೊಡನೆ ನಲಿದಾಡಲು ಅದೆಂತಹ ಕಾತುರದಿಂದ ಕಾಯುವರು ಎಂಬುದು ನಿಮಗೆಲ್ಲ ಗೊತ್ತು. ಆದರೆ ಭಕ್ತಿ ಸಂಬಂಧದಿಂದ ಒಂದು ಕಡೆ ಸೇರಬೇಕು; ಈ ಸಂಬಂಧ ರಕ್ತ ಸಂಬಂಧಕ್ಕಿಂತಲೂ ಶ್ರೇಷ್ಠ ಎಂಬುದನ್ನು ಇನ್ನೂ ನೀವು ಬಹಳ ಜನ ಅರಿತಿಲ್ಲ; ಈಗಲಾದರೂ ಅರಿಯಬೇಕು.

ತಮ್ಮ ಮಕ್ಕಳು ತೌರಿಗೆ ಬರಬೇಕು; ಪ್ರೀತಿಪೂರ್ವಕವಾಗಿ ಸೋದರ-ಸೋದರಿಯರೊಡನೆ ಬೆರೆಯಬೇಕು; ತಮ್ಮನ್ನು ಗೌರವಿಸಬೇಕು; ತಂದೆ ತಾಯಿಯರ ವಾತ್ಸಲ್ಯದಲ್ಲಿ ಮೀಯಬೇಕು ಎಂದು ಯಾವ ತಂದೆ ತಾಯಿ ಬಯಸರು? ಸೃಷ್ಟಿಕರ್ತನೆಂಬ ತಂದೆಯ, ಮಾತೃ ಹೃದಯಿಯಾದ ನನ್ನ ಇಚ್ಛೆಯೂ ಅದೇ ಆಗಿದೆ. ಇದನ್ನು ನೀವೇಕೆ ಅರ್ಥ ಮಾಡಿಕೊಳ್ಳುತ್ತಿಲ್ಲ? ಇಷ್ಟು ದಿನ ನಿಮಗೆಲ್ಲ ಅಂಥ ಅವಕಾಶ ಕಲ್ಪಿಸಿದೆ. ಸಮಾನತೆ -ಸೋದರತ್ವ - ಸ್ವಾತಂತ್ರ್ಯ ಇವು ನನ್ನ ತತ್ವದ ಮುಖ್ಯ ಮೂರು ಸೂತ್ರಗಳು. ಇಲ್ಲಿ ಅವು ಮೂರನ್ನು ಕಾಣಬಹುದು. ಅದಕ್ಕಾಗಿ ನಾನು ನಿಮಗೆ ಹಾರ್ದಿಕ ಆಹ್ವಾನ ನೀಡುತ್ತಿದ್ದೇನೆ. ನೀವೆಲ್ಲರೂ ಬನ್ನಿರಿ, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬನ್ನಿರಿ.

ಸೃಷ್ಟಿಕರ್ತ ಪರಮಾತ್ಮನೇ ನಮ್ಮೆಲ್ಲರ ತಂದೆ, ಒಂದೊಂದು ಕಾಲದಲ್ಲಿ ಒಬ್ಬೊಬ್ಬರು ಲೋಕದ ಉದ್ಧಾರಕ್ಕಾಗಿ, ಜನರನ್ನು ಧರ್ಮ ಮಾರ್ಗಕ್ಕೆ ಕರೆತರಲು ಮಧ್ಯವರ್ತಿಗಳನ್ನಾಗಿ ಆಯ್ಕೆ ಮಾಡಿಕೊಂಡ. ಬುದ್ಧ, ಮೊಹಮ್ಮದ್, ಏಸು, ನಾನು ಎಲ್ಲಾ ಅಣ್ಣ ತಮ್ಮಂದಿರಂತೆ. ದೇವರೆಂಬ ತಂದೆಯ ಅವಿಭಾಜ್ಯ ಕಿರಣಗಳು. ದೇವರು ಪರಿಪೂರ್ಣನು, ನಿತ್ಯನು. ಅವನು ಸೀಮಿತರಾದ ತಾಯಿ ತಂದೆಗಳ ಹೊಟ್ಟೆಯಲ್ಲಿ ಹುಟ್ಟಿ ಬರುವುದಿಲ್ಲ ಮತ್ತು ಕರ್ತನು ಎಲ್ಲಿಯೋ ಒಂದು ಕಡೆ ಯಾವುದೋ ಲೋಕದಲ್ಲಿ ಸೀಮಿತನಾಗಿ ಇರುವುದಿಲ್ಲ. ಸೃಷ್ಟಿ - ಸ್ಥಿತಿ -ಲಯ - ತಿರೋದಾನ ಎಂಬ ನಾಲ್ಕು ಕಾರ್ಯಗಳನ್ನು ಮಾಡಿ, ತಾನು ನೇರವಾಗಿ ಕೆಲವು ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಂಡು, ಅವರಲ್ಲಿ ತನ್ನ ಅದ್ಭುತವಾದ ಕಾರುಣ್ಯ ಅವತೀರ್ಣಗೊಳಿಸಿ, ಸಾಮರ್ಥ್ಯವನ್ನು ನೀಡಿ, ಲೋಕದ ಜನತೆಯನ್ನು ಅನುಗ್ರಹಿಸಿ ಮುನ್ನಡೆಸಲು ಅವಕಾಶ ನೀಡುವನು. ಸೃಷ್ಟಿಕರ್ತನ ಉದ್ದೇಶ ಲೋಕದ ಮಾನವರು ಲೋಕದ ತಂದೆಯಾದ ದೇವನನ್ನು ಅರಿಯಬೇಕು. ಅವನ ಪ್ರೀತಿಯ ಕಾರುಣ್ಯ ಜಲದಲ್ಲಿ ಮೀಯಬೇಕು ಎಂಬುದೇ ಆಗಿದೆ. ಹೀಗಾಗಿ ಎಲ್ಲಾ ಧರ್ಮಗಳ ಏಕಮೇವ ಧ್ಯೇಯವು ಸೃಷ್ಟಿಕರ್ತ ಆಗಿದ್ದಾನೆ.

ಈ ಸತ್ಯವನ್ನು ಗ್ರಹಿಸುವಲ್ಲಿ ಸೀಮಿತ ಬುದ್ಧಿಯ ಮಾನವರು ಹಲವಾರು ತಪ್ಪುಗಳನ್ನು ಎಸಗಿ ಮೂಢನಂಬಿಕೆ, ಬಹುದೇವೋಪಾಸನೆ ಮುಂತಾದವನ್ನು ರೂಢಿಸಿಕೊಂಡಿದ್ದರೆ ಸಮಾಜವನ್ನು ಒಡೆದು ಆಳಬೇಕೆಂಬ ಸ್ವಾರ್ಥ ಬುದ್ಧಿಯ ಜನರು ಅತ್ಯಂತ ವಿಷಮ ರೀತಿಯ ವರ್ಗೀಕರಣವಾದ ವರ್ಣ ವ್ಯವಸ್ಥೆ

ಜಾತಿ ಪದ್ಧತಿಯನ್ನು ಹುಟ್ಟು ಹಾಕಿ ಪೋಷಿಸುತ್ತ ಬಂದು ಅನೇಕ ಅನಿಷ್ಠ ಪರಿಣಾಮಗಳಿಗೆ ಕಾರಣರಾದರು. ಶೋಷಣೆಯು ಅಗಾಧವಾಗಿ ಸೃಷ್ಟಿಯ ಅರ್ಧ ಅಂಗವಾದ ಮಹಿಳೆಯರನ್ನು ಒಳಗೊಂಡು ಬಹಳ ಜನ ದೇವರು- ಧರ್ಮ- ಸಂಸ್ಕಾರ ಹಕ್ಕು; ಇವುಗಳಿಂದ ವಂಚಿತರಾದರು.

ಮಮತೆಯ ಮಕ್ಕಳೆ, ತಾನೇ ಸೃಷ್ಟಿಸಿದ ಈ ಜಗತ್ತು, ಮಾನವ ಸಮಾಜ ದಾರಿ ತಪ್ಪುತ್ತ ಹೊರಟು ಮಾನವ ಸಮಾಜವನ್ನು ಅಂದಗೆಡಿಸಿದ್ದನ್ನು ಕಂಡು ನೊಂದ ಕರ್ತನು, ನನ್ನಲ್ಲಿ ಅನುಗ್ರಹ ಇಳಿಸಿ, ಸಮಾಜ ಸುಧಾರಣೆಗೆ ನನ್ನನ್ನು ಆಯ್ಕೆ ಮಾಡಿಕೊಂಡನು.

ಕರ್ತನಟ್ಟಿದಡೆ ಮರ್ತ್ಯದಲ್ಲಿ ಮಹಾಮನೆಯ ಕಟ್ಟಿದೆ
ಸತ್ಯ ಶರಣರಿಗೆ ತೊತ್ತು ಭೃತ್ಯನಾಗಿ ಸವೆದು ಬದುಕಿದೆನು
ಕರ್ತನ ಬೆಸನು ಮತ್ತೆ ಬರಲೆಂದಟ್ಟಿದಡೆ
ಲಿಂಗದೇವರ ನಿರೂಪಕ್ಕೆ ಮಹಾಪ್ರಸಾದವೆಂಬೆನು

ದೇವನ ಆಜ್ಞೆಯಂತೆ ನನ್ನ ಬದುಕು ನಡೆಯಿತು. ನಾನು ಆರಂಭಿಸಿದ ಸತ್ಯ ಸ್ಥಾಪನೆಯ ಕಾರ್ಯವನ್ನು ಅಸಂಖ್ಯಾತ ಶರಣರು ಮುಂದುವರಿಸಿದರು. ತಮ್ಮ ಪ್ರಾಣತೆತ್ತು ವಚನ ಸಾಹಿತ್ಯವನ್ನು ರಕ್ಷಿಸಿ, ನಿಮಗೆ ಅಮೂಲ್ಯ ಜ್ಞಾನ ಭಂಡಾರವನ್ನು ಕೊಟ್ಟಿದ್ದಾರೆ. ಮಾನವ ಸಮಾಜ ವರ್ಣ-ಜಾತಿ, ವರ್ಗ-ಅಂತಸ್ತು, ಮತ-ಪಂಥ, ಬಣ್ಣ-ಲಿಂಗ ಭೇದಗಳಿಂದ ಅಸಮಾನತೆಯನ್ನು ಸೃಷ್ಟಿಸಿರುವುದನ್ನು ಕಂಡು ಇವೆಲ್ಲವುಗಳಿಂದ ಹೊರತಾದ "ಗಣ ಧರ್ಮ"ವನ್ನು ನಾನು ಕೊಟ್ಟಿದ್ದೇನೆ. ಇಂದು ನೀವು ಕೆಲವರು ಹುಟ್ಟಿನಿಂದಲೇ ಲಿಂಗಾಯತರಾಗಿರಬಹುದು, ನಿಮ್ಮ ತಾಯಿ ತಂದೆ ಲಿಂಗಾಯತರಾದ ಕಾರಣ. ಆದರೆ ಇದು ನನ್ನ ಆಶಯವಲ್ಲ. ಏಕೆಂದರೆ ಹುಟ್ಟಿನಿಂದ ಬರುವುದು ಜಾತಿ, ಸಂಸ್ಕಾರದಿಂದ ಬರುವುದು ಧರ್ಮ, ನೀವು ಸಂಸ್ಕಾರವನ್ನು ಹೊಂದಿ ಧರ್ಮಾಚರಣೆಯಿಂದ ಲಿಂಗಾಯತರಾಗಬೇಕೇ ಹೊರತು, ಯಾವ ಸಂಸ್ಕಾರವನ್ನೂ ಹೊಂದದೆ ಜಾತಿಯಿಂದ ಲಿಂಗಾಯತರು ಎಂದು ಹೇಳಿಕೊಳ್ಳುವುದು ನನಗೆ ಸಮ್ಮತವಾಗದ ವಿಷಯ. ನನ್ನ ತತ್ವ ಸಂಹಿತೆ ಯಾವುದೇ ಒಂದು ಜಾತಿ, ವರ್ಣಕ್ಕೆ ಸೀಮಿತವಾಗದ "ಗಣ ಧರ್ಮ"ವಾದ್ದರಿಂದ ಈ ಮಾರ್ಗವನ್ನು ಯಾರು ಬೇಕಾದರೂ ಸ್ವೀಕರಿಸಬಹುದು. ಹಾಗೆ ಸ್ವೀಕರಿಸಿದವರನ್ನು ಪ್ರೀತಿಯಿಂದ ನೀವು ಸ್ವಾಗತಿಸಿ ಬರಮಾಡಿಕೊಂಡು, ಸಮರಸ ಮಾಡಿಕೊಳ್ಳಬೇಕು. ಇಂಥ ಸಾಮರಸ್ಯ ಮೂಡಬೇಕಾದರೆ ನೀವು ಆಗಾಗ ಒಂದೆಡೆ ಸೇರಬೇಕು.

ಕಾಗೆಯೊಂದಗುಳ ಕಂಡಡೆ
ಕರೆಯದೆ ತನ್ನ ಬಳಗವೆಲ್ಲವ?
ಕೋಳಿ ಒಂದು ಕುಟುಕ ಕಂಡಡೆ
ಕೂಗಿ ಕರೆಯದೆ ತನ್ನ ಕುಲವನೆಲ್ಲವ?
ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ
ಆ ಕಾಗೆ ಕೋಳಿಯಿಂದ ಕರಕಷ್ಟ ಲಿಂಗದೇವಾ.

ಸೃಷ್ಟಿಕರ್ತನನ್ನು ಇಷ್ಟಲಿಂಗ ರೂಪದಲ್ಲಿ ನಿತ್ಯವೂ ಆರಾಧಿಸಿರಿ. ಇದು ವೈಯಕ್ತಿಕ ಆತ್ಮೋದ್ಧಾರಕ್ಕಾಗಿ. ಸಂಸ್ಕಾರ ಮತ್ತು ಸಂಘಟನೆಗಾಗಿ ಸಮುದಾಯ ಜೀವನದ ಸೂತ್ರಗಳಾಗಿ ಸಾಮೂಹಿಕ ಪ್ರಾರ್ಥನೆಯನ್ನು ಅಳವಡಿಸಿಕೊಳ್ಳಿರಿ.

<u>ಕೌಟುಂಬಿಕ ಪ್ರಾರ್ಥನೆ :</u> ಪ್ರತಿಯೊಬ್ಬ ವ್ಯಕ್ತಿಯ ಆತ್ಮೀಯ ವಲಯವೆಂದರೆ ಕುಟುಂಬ. ಕುಟುಂಬದವರೆಲ್ಲ ಕುಳಿತು ವಾರಕ್ಕೊಮ್ಮೆಯಾದರೂ ಸಾಮೂಹಿಕ ಇಷ್ಟಲಿಂಗಾರ್ಚನೆ ಮಾಡಿರಿ. ಈ ಮೂಲಕ ಕೌಟುಂಬಿಕ ಸೌಹಾರ್ದತೆ ಬೆಳೆವುದಲ್ಲದೆ ಎಲ್ಲರಲ್ಲೂ ಧರ್ಮ ಶ್ರದ್ಧೆ ಗಾಢವಾಗುವುದು. ದಿನ

ನಿತ್ಯ ಸಂಜೆಯ ವೇಳೆಯಲ್ಲಿ ಹತ್ತು ಹದಿನೈದು ನಿಮಿಷ ಕಾಲವಾದರೂ ಮನೆ ಮಂದಿಯೆಲ್ಲ ಕುಳಿತು ಸಂಜೆಯ ಪ್ರಾರ್ಥನೆ -ನೆನಹು ಮಾಡಿರಿ.

<u>ಶರಣ ಸಂಗಮ-ವಾರದ ಪ್ರಾರ್ಥನೆ :</u> ಸಮುದಾಯ ಜೀವನದ ಶ್ರೇಷ್ಠ ಸೂತ್ರವೆಂದರೆ ಸಾಮೂಹಿಕ ಪ್ರಾರ್ಥನೆ. ವಾರಕ್ಕೊಮ್ಮೆ ಒಂದು ಸ್ಥಳದಲ್ಲಿ ಧರ್ಮಾನುಯಾಯಿಗಳು ಸೇರಿ ಸಾಮೂಹಿಕ ಪ್ರಾರ್ಥನೆ ಮಾಡಿ, ನಂತರ ವಚನಾನುಭವ ಗೋಷ್ಠಿ ಮಾಡಿರಿ. ಸೃಷ್ಟಿಕರ್ತನನ್ನು ಭಜಿಸಿ ಪ್ರಾರ್ಥಿಸಿ, ಸ್ತುತಿಸುವ ಮೂಲಕ ಅವನಿಗೆ ಕೃತಜ್ಞತೆ ಸಲ್ಲಿಸಿರಿ.

<u>ನೆನಹು</u> : ಪ್ರತಿದಿನ ಸಂಜೆ 7 ಗಂಟೆಗೆ ಸರಿಯಾಗಿ ನೀವು ಎಲ್ಲೇ ಇದ್ದರೂ ಆ ಸ್ಥಳದಲ್ಲಿ 15 ನಿಮಿಷದವರೆಗೆ ಪ್ರಾರ್ಥನೆಯನ್ನು ವೈಯಕ್ತಿಕವಾಗಿ ಆಗಲಿ, ಸಾಮೂಹಿಕವಾಗಿ ಆಗಲಿ, ಅಳವಡಿಸಿ ಕೊಂಡು ತಪ್ಪದೇ ಮಾಡಿರಿ.

<u>ಗಣ ಮೇಳ</u> : ನನ್ನ ವಚನಗಳನ್ನು ಗಮನಿಸಿರಿ. ಗಣ ಮೇಳಾಪಕ್ಕೆ ಎಷ್ಟು ಒತ್ತು ಕೊಟ್ಟಿದ್ದೇನೆ ನೋಡಿರಿ. ಪಕ್ಷಿಗಳು ಸಮೂಹ ಜೀವನವನ್ನು ಇಷ್ಟಪಡುತ್ತವೆ. ಸಮೂಹವನ್ನು ತೊರೆದವನು ವಿಕೃತ ಮನಸ್ಸಿನವನಾಗುವನು. ಆಯಾ ಊರುಗಳಲ್ಲಿ ಧರ್ಮ ಬಾಂಧವರು ಧಾರ್ಮಿಕ ಭ್ರಾತೃತ್ವ ಭಾವ ಬೆಳೆಸಿಕೊಂಡು ವರ್ಷದಲ್ಲಿ ಒಂದು ದಿನವಾದರೂ ಒಟ್ಟುಗೂಡಿ ಪ್ರಾರ್ಥನೆ- ಪೂಜೆ ಮಾಡಿರಿ. ಶಿವರಾತ್ರಿಯಂದು ಬೆಳಿಗ್ಗೆ ವಿಶಾಲವಾದ ಮೈದಾನದಲ್ಲಿ ಧರ್ಮಬಾಂಧವರೆಲ್ಲರೂ ಸೇರಿ ಗಣಮೇಳದಲ್ಲಿ ಭಾಗಿಗಳಾಗಿರಿ.

<u>ಶರಣ ಮೇಳ :</u> ವ್ಯಕ್ತಿಯು ವೈಯಕ್ತಿಕ ಪೂಜೆ ಮಾಡುವುದು, ಕುಟುಂಬದವರೆಲ್ಲರು ಒಂದೆಡೆ ಸೇರಿ ಪ್ರಾರ್ಥಿಸುವುದು ನಿತ್ಯ ವಿಧಿಗಳು. ಸಾಮೂಹಿಕ ಪ್ರಾರ್ಥನೆ ವಾರಕ್ಕೊಮ್ಮೆ ನಡೆಯುವುದರಿಂದ, ವಿವಿಧ ಬಡಾವಣೆ ಪ್ರದೇಶಗಳ ಜನರು ಅಲ್ಲಲ್ಲೇ ಕಲೆತು ಅದನ್ನು ಮಾಡುವರು. ಗಣಮೇಳವು ಆಯಾ ಗ್ರಾಮ, ಊರು, ನಗರಗಳ ಧರ್ಮಬಾಂಧವರನ್ನು ಒಂದೆಡೆ ತರಲು ನೆರವಾಗುವುದು. ಇನ್ನು ಪ್ರಾದೇಶಿಕತೆ, ಭಾಷೆ, ಮುಂತಾದ ಎಲ್ಲಾ ಸೀಮೆದಾಟಿ ಧಾರ್ಮಿಕ ಸೂತ್ರದ ಮೇಲೆ ನಮ್ಮ ತತ್ವಾನುಯಾಯಿಗಳನ್ನು ಬೆಸೆಯುವ ಸೂತ್ರವೇ ಶರಣ ಮೇಳ. ಆದ್ದರಿಂದ ನಿಮ್ಮ ಎಲ್ಲ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಕೂಡಲ ಸಂಗಮಕ್ಕೆ ಧಾವಿಸಿ ಬಂದು ಜನವರಿ 11ರಿಂದ 15ರವರೆಗೆ ನಡೆಯುವ ಶರಣ ಮೇಳದಲ್ಲಿ ನೀವು ತಪ್ಪದೇ ಭಾಗಿಗಳಾಗಿರಿ.

ಸತ್ಯ ಸ್ಥಾಪನೆಗಾಗಿ, ಸಮಾನತೆಯ ಅನುಷ್ಠಾನಕ್ಕಾಗಿ ನಾವುಗಳೆಲ್ಲರೂ ಮಾಡಿದ ತ್ಯಾಗವನ್ನು ನೀವು ಮರೆಯಬಾರದು. ನಮ್ಮ ಅಂತಃಕರಣ ಪೂರ್ವಕ ಕಳಕಳಿಯನ್ನು ಪ್ರಾಂಜಲ ಮನಸ್ಸಿನಿಂದ ಅರಿಯಬೇಕು. ಜಗಬದುಕಲೆಂದು ಜನ ಬದುಕಲೆಂದು ವಚನ ವಾಙ್ಮಯವನ್ನು ಹೋರಾಡಿ ರಕ್ಷಿಸಿದ ಅಕ್ಕನಾಗಲಾಂಬಿಕೆ, ಮಡಿವಾಳ ಮಾಚಯ್ಯ, ಚನ್ನಬಸವಣ್ಣ ಮುಂತಾದವರ ಹೋರಾಟ ನಿಮ್ಮನ್ನು ಎಚ್ಚರಿಸದೆ? ಸಮಾನತೆಯ ಧ್ವಜವನ್ನು ಹಾರಿಸಲಿಕ್ಕಾಗಿ ಹರಳಯ್ಯ -ಮಧುವಯ್ಯ- ಶೀಲವಂತರು ಮಾಡಿದ ಪ್ರಾಣಾರ್ಪಣೆ, ಬಲಿದಾನ ನಿಮ್ಮ ಅಂತಃಕರಣವನ್ನು ಕಲಕದೆ?

ಹೆತ್ತ ತಂದೆ ಬಯಸುವುದೇನನ್ನು? ತನ್ನ ಮಕ್ಕಳೆಲ್ಲರೂ ಒಂದೆಡೆ ಸೇರಿ ಹಾಡಿ ಪಾಡಿ ನಲಿಯ ಬೇಕೆಂದು ತಾನೇ? ಅದೇ ನನ್ನ ಬಯಕೆ ಸಹ. ತೌರಿಗೆ ಬಂದರೆ ಏನು ಸಿಗುತ್ತದೆ ಎಂದು ನಿಮ್ಮ ಪ್ರಶ್ನೆಯೆ? ಜ್ಞಾನದ ವಸ್ತ್ರವನ್ನು ನನ್ನ ಪ್ರತಿನಿಧಿಗಳಾದ ಬೋಧಕರು ಉಡಿಸುವರು. ಸದ್ಗುಣಗಳ ಆಭರಣ ತೊಡಿಸುವರು. ವಚನ ಜ್ಞಾನದ ಸಂಪದವನ್ನು ಉಡಿ ತುಂಬಿ ಕಳಿಸುವರು. ಐಹಿಕ ಜಗತ್ತಿನಲ್ಲಿ ನನಗೆ ಮೆಚ್ಚುಗೆಯಾಗುವಂತೆ ನೀವು ಹೇಗೆ ಒಗೆತನವ ಮಾಡಬೇಕೆಂಬುದನ್ನು ಕಲಿಸಿ ಕಳಿಸುವರು.

ಷಡಂಗ ದಾಸೋಹ ಮಾಡಿರಿ. ತನು-ಮನ-ಧನ-ಪ್ರಾಣ-ಅಭಿಮಾನ- ಸಮಯ; ಈ ಆರನ್ನೂ

****

ಮೀಸಲಿರಿಸಿ ನಮ್ಮ ತತ್ವಗಳ ಪಾಲನೆಗಾಗಿ ಶ್ರಮಿಸಿರಿ. ಸಮಷ್ಟಿಯ ಉದ್ಧಾರಕ್ಕಾಗಿ ವೈಯಕ್ತಿಕ ಅಹಂಕಾರ - ಪ್ರತಿಷ್ಠೆಗಳೇ ಕಾರಣ ಎಂಬುದನ್ನು ಈಗಲಾದರೂ ಅರಿತುಕೊಳ್ಳಿರಿ.

ನಿಮ್ಮನ್ನು ಯಾರಾದರೂ ಶರಣ ಮೇಳಕ್ಕೆ ಆಹ್ವಾನಿಸಬೇಕೆಂದು, ಕರೆ ಕಳುಹಿಸಬೇಕೆಂದು ನಿರೀಕ್ಷಿಸುವಿರೋ? ಕೂಡದು. ನದಿಯು ನಿರಂತರವಾಗಿ ಹರಿಯುತ್ತಿರುತ್ತದೆ; ಆದರಿಂದ ಯಾರು ಬೇಕಾದರೂ ನೀರನ್ನು ತುಂಬಿಕೊಳ್ಳಬಹುದು. ಹಾಗೆಯೇ ಶರಣ ಮೇಳದಲ್ಲಿ ವಚನ ವಾಙ್ಮಯ ಗಂಗೆ ಹರಿಯುತ್ತಲಿರುತ್ತಾಳೆ. ಬನ್ನಿ, ನಿಮ್ಮ ಹೃದಯ -ಮನ-ಬುದ್ಧಿ ಹಿಡಿಯುವಷ್ಟು ತುಂಬಿಕೊಳ್ಳಿರಿ. ನೀವು ನನಗಾಗಿ, ನಮ್ಮ -ನಿಮ್ಮೆಲ್ಲರ ತಂದೆಯಾದ ಲಿಂಗದೇವನನ್ನು ಆರಾಧಿಸಲು ಬರುತ್ತೀರೆಂದು ನಾನು ಸದಾ ನಿರೀಕ್ಷಿಸುತ್ತ ವಾತ್ಸಲ್ಯ ಪೂರ್ಣವಾಗಿ ನಿಮಗೆ ಈ ಆಹ್ವಾನ ನೀಡಿರುವೆನು.

ನಿಮ್ಮ ಪ್ರೀತಿಯ ತಂದೆ - ಬಸವಣ್ಣ
(ಗ್ರಹಿಸಿದವರು -ಬಸವಾತ್ಮಜೆ ಮಾತಾಜಿ)

ದೃಶ್ಯ ಮಾಲಿಕೆಯ ಸಿ.ಡಿ.ಗಳು

ಶರಣ ಮೇಳದಲ್ಲಿ ಬಿಡುಗಡೆಯಾಗಲಿರುವ ವೀಡಿಯೋ ತಟ್ಟೆಗಳು

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ವಿಶ್ವಧರ್ಮ ಪ್ರವಚನದ ವಿಷಯಗಳು

1.ಪ್ರವಚನದ ಆವಶ್ಯಕತೆ 2.ವಿಜ್ಞಾನ ಯುಗದಲ್ಲಿ ಧರ್ಮದ ಆವಶ್ಯಕತೆ 3.ಧರ್ಮ ಎಂದರೇನು? 4. ಅವತಾರ ಸಿದ್ಧಾಂತ 5.ದೇವರ ಅಸ್ತಿತ್ವ 6.ಬಸವಣ್ಣನವರ ಜನನ 7. ಶಿಕ್ಷಣ ಹೇಗಿರಬೇಕು? 8. ಬಸವರಸನ ಗೃಹತ್ಯಾಗ 9.ಆತ್ಮಸ್ವರೂಪ 10.ಪ್ರಗತಿಪರ ಧರ್ಮ 11.ಬಸವರಸರ ಕನಸು 12.ವಿವಾಹದ ಪ್ರಸ್ತಾಪ -ದಿವ್ಯಾನುಭವ 13.ದೇವರ ಸ್ವರೂಪ 14. ದೇವರಿಗಾಗಿ ಹಂಬಲ 15.ವಿವಾಹ ಮತ್ತು ಕಾಯಕ 16.ಅನುಭವ ಮಂಟಪ 17.ಅಕ್ಕಮಹಾದೇವಿ -ಪ್ರಭುದೇವರ ಸಂವಾದ ಭಾಗ-1, 18.ಭಾಗ-2, 19. ಕರ್ಮಸಿದ್ಧಾಂತ 20. ಯೋಗ ಎಂದರೇನು?- ವಿವಿಧ ಬಗೆಗಳು -ಲಿಂಗಾಂಗ ಯೋಗ 21.ಗುರು ಕರುಣೆ -ದೀಕ್ಷಾ ಸಂಸ್ಕಾರ, 22.ಅಷ್ಟಾವರಣಗಳು 23.ಪಾದೋದಕ, ಪ್ರಸಾದ -ಸಸ್ಯಾಹಾರ 24.ಷಟಸ್ಥಲ ದರ್ಶನ 25.ಪಂಚ ಆಚಾರಗಳು 26. ಕಲ್ಯಾಣ ಕ್ರಾಂತಿ.

ಒಂದಕ್ಕೆ ಬೆಲೆ 75ರೂ. ಇಡೀ ಸೆಟ್ಟಿಗೆ 1950ರೂ (ರಿಯಾಯಿತಿಯೊಡನೆ 1850-00)

ಪೂಜ್ಯ ಶ್ರೀ ಜಗದುರು ಚನ್ನಬಸವಾನಂದ ಸ್ವಾಮಿಗಳ ಪ್ರವಚನದ ಡಿ.ವಿ.ಡಿ

1. ಮಾಯೆಯ ವಿಡಂಬನೆ 2.ಅಕ್ಕನ ದೇವಪ್ರೇಮ 3.ಮಾತಾಜಿ ಎಂಬ ಮಹಾಶಕ್ತಿ 4.ದೇವರಿಗೆ ಕೃತಜ್ಞತೆ ಸಲ್ಲಿಸುವುದು ಹೇಗೆ? 5. ನಂಬರು ನಚ್ಚರು ಬರಿದೇ ಕರೆವರು 6. ಜಂಗಮ ಯಾರು? 7. ಬಸವ ಧರ್ಮ- ಸದೃಢ ಭಾರತ 8. ಕಾಯಕ -ದಾಸೋಹ 9.ಶರಣ ಸಂಸ್ಕೃತಿಯ ಹಿರಿಮೆ 10. ಅರಿವಿನ ಕುರುಹಾದ ಇಷ್ಟಲಿಂಗ.

ಒಂದರ ಬೆಲೆ 75ರೂ, 10ರ ಸೆಟ್ ತೆಗೆದುಕೊಂಡರೆ 750ರೂ (ರಿಯಾಯಿತಿ ದರದಲ್ಲಿ 10 ಸಿ.ಡಿಗೆ 700ರೂ.)

1.ಬಸವ ದರ್ಶನ 2.ಶರಣ ದರ್ಶನ 3. ಶರಣ ಗೀತಾಂಜಲಿ ಎಂಬ ನೃತ್ಯಾಭಿನಯದ ವೀಡಿಯೋ ಸಿಡಿ 215ರೂ. ಮೂರೂ ಸೇರಿ ತೆಗೆದುಕೊಂಡವರಿಗೆ 2750ರೂ (165ರೂ ರಿಯಾಯಿತಿ)

ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ, ಬೆಂಗಳೂರು, 2035, 20ನೇ ಮುಖ್ಯರಸ್ತೆ 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010, ದೂರವಾಣಿ: 080-23131476



2012 - ಲಿಂಗಾಯತ ಧರ್ಮದ ಹಬ್ಬ ಹುಣ್ಣಿಮೆ ಉತ್ಸವಗಳು



ಕೂಡಲಸಂಗಮದಲ್ಲಿ 25ನೆಯ ಶರಣ ಮೇಳ	ಜನವರಿ 11ರಿಂದ 15
ಬಸವ ಧರ್ಮದ ಸಂಸ್ಥಾಪನಾ ದಿನ	ಶರಣ ಸಮಾಗಮ ಜನವರಿ 14
ಸಿದ್ಧರಾಮೇಶ್ವರ ಜಯಂತಿ ★	ಜನವರಿ 15
ಗಣರಾಜ್ಯೋತ್ಸವ ★	ಜನವರಿ 26
ಚನ್ನಹುಣ್ಣಿಮೆ (ಉಳಿವೆಯಲ್ಲಿ ರಥೋತ್ಸವ) ಗಣಭೋಜನ	ಫೆಬ್ರವರಿ 07
ಸರ್ವಶರಣರ ದಿನಾಚರಣೆ/ಮಹಾಶಿವರಾತ್ರಿ/ಗಣಮೇಳ	ಫೆಬ್ರವರಿ 20
ಪೂಜ್ಯ ಮಾತಾಜಿ ವರ್ಧಂತಿ	ಮಾರ್ಚ್ 13
ಅಲ್ಲಮಪ್ರಭು ಜಯಂತಿ (ಚಾಂದ್ರಮಾನ ಯುಗಾದಿ) ★	ಮಾರ್ಚ್ 23
ಅಲ್ಲಮಪ್ರಭು ಗಿರಿಯಲ್ಲಿ ಲಿಂಗಾಯತ ಗಣಮೇಳ	ಮಾರ್ಚ್ 23,24,25
ಅಕ್ಕಮಹಾದೇವಿ ಜಯಂತಿ	ಏಪ್ರಿಲ್ 06
ಹರಳಯ್ಯ ಜಯಂತಿ	ಏಪ್ರಿಲ್ 06
ಬಸವ ಜಯಂತಿ	ಏಪ್ರಿಲ್ 24
ಧಾರವಾಡದಲ್ಲಿ ಶರಣೋತ್ಸವ	ಏಪ್ರಿಲ್ 28,29,30
ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ಬಸವೋತ್ಸವ	ಮೇ 26,27,28
ಪೂಜ್ಯಶ್ರೀ ಮಹಾಜಗದ್ಗುರು	
ಲಿಂಗಾನಂದ ಸ್ವಾಮಿಗಳ ಲಿಂಗೈಕ್ಯ ಸಂಸ್ಮರಣೆ	ಜೂನ್ 30
ಬಸವ (ಲಿಂಗೈಕ್ಯ ಸಂಸ್ಮರಣೆ) ಷಷ್ಠಿ	ಜುಲೈ 23
ನೀಲಮ್ಮ (ಲಿಂಗೈಕ್ಯ ಸಂಸ್ಮರಣೆ) ಷಷ್ಠಿ	ಜುಲೈ 24
ಸ್ವಾತಂತ್ರೋತ್ಸವ ★	ಅಗಸ್ಟ್ 15
ಪೂಜ್ಯಶ್ರೀ ಮಹಾಜಗದ್ಗುರು	
ಲಿಂಗಾನಂದ ಸ್ವಾಮಿಗಳ 81ನೆಯ ಜಯಂತಿ ★	ಸೆಪ್ಟಂಬರ್ 19
(ಗಣೇಶ ಚೌತಿ) ರಾಷ್ಟ್ರೀಯ ಬಸವ ದಳಗಳ ಹುಟ್ಟುಹಬ್ಬ ★	ಸೆಪ್ಟಂಬರ್ 19
ಪೂಜ್ಯಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ವರ್ಧಂತಿ	ಸೆಪ್ಟಂಬರ್ 19
ಗಾಂಧಿ ಜಯಂತಿ ★	ಅಕ್ಟೋಬರ್ 02
ಕಲ್ಯಾಣಕ್ರಾಂತಿ ಸಂಸ್ಮರಣೆ	ಅಕ್ಟೋಬರ್ 23, 24
ಬಸವ ಕಲ್ಯಾಣದಲ್ಲಿ 11ನೆಯ ಕಲ್ಯಾಣ ಪರ್ವ	ಅಕ್ಟೋಬರ್ 27, 28, 29
ಬಸವ ಧರ್ಮದ ವಿಜಯೋತ್ಸವ ★	ಅಕ್ಟೋಬರ್ 29
ಕನ್ನಡ ರಾಜ್ಯೋತ್ಸವ ★	ನವೆಂಬರ್ 01
ಚನ್ನಬಸವೇಶ್ವರ ಜಯಂತಿ ★	ನವೆಂಬರ್ 14
ಚನ್ನಬಸವೇಶ್ವರ ಲಿಂಗೈಕ್ಯ ದಿನಾಚರಣೆ	ನವೆಂಬರ್ 28







★ ಸರ್ಕಾರಿ ರಜಾ ದಿನಗಳು





CPMG/KA/BGW/50/2009-2011, RNI 19980/70, POSTED AT MBC BANGALORE GPO ON 3,10,20 OF EVERY MONTH. LICENCED TO POST WITHOUT PRE PAYMENT WPP-17, PAGES 32+4 (COVER PAGES)